# ಶೃಂಗೇರಿ ಶಂಕರಾಚಾರ್ಯರು

## ಪರಮಪೂಜ್ಯ ಜಗದ್ಗುರು
## ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು



**Book Title:**

**SRINGERI SHANKARACHARYARU**
**Paramapujya Jagadguru Sri Bharathi Theertha Mahaswamigalu**

**Language:** Kannada

**Translator:** Dr. R. Muralishankar

**Illustrations:** Esakki & Sushil
**Layout:** K. Parthasarathy

**Published by:**
Centre for Brahmavidya
SVK Towers, 8th Floor
A25, Industrial Estate, Guindy
Chennai 600032
**Email:** contact@centreforbrahmavidya.org
**Website**: www.centreforbrahmavidya.org

**ISBN:** 978-81-957509-0-0

© **Centre for Brahmavidya**
All rights reserved

**Digital Edition:** 2022
(For free distribution only)




ಅದ್ವೈತ–ವೇದಾಂತದ# ಹೆಸರಾಂತ ಪ್ರತಿಪಾದಕರಾದ, ಪರಮಶಿವನ ಅವತಾರವೆಂದು ಪೂಜಿಸಲ್ಪಡುವ ಜಗದ್ಗುರು ಶ್ರೀ ಆದಿ ಶಂಕರ ಭಗವತ್ಪಾದರು ಮಾನನೀಯ ಶೃಂಗೇರಿ ಶ್ರೀ ಶಾರದಾ ಪೀಠವನ್ನು ಸ್ಥಾಪಿಸಿದರು. ಈ ಪೀಠ ಜ್ಞಾನಿಗಳ, ಪರಮಹಂಸ ಸಂನ್ಯಾಸಿಗಳ ಮತ್ತು ಕರುಣಾಮಯಿ ಗುರುಗಳ ಅವಿಚ್ಛಿನ್ನ ಪರಂಪರೆಯಿಂದ ಅಲಂಕೃತವಾಗಿದೆ. ಈ ಸಚಿತ್ರ ಪುಸ್ತಕ ಶ್ರೀ ಶಾರದಾ ಪೀಠದ 36ನೇ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಜೀವನವನ್ನು ಮತ್ತು ಬೋಧನೆಗಳನ್ನು ಒಳಗೊಂಡಿದೆ.



ಮಚಲೀಪಟ್ಟಣದಲ್ಲಿ* ಶ್ರೀ ವೇಂಕಟೇಶ್ವರ ಅವಧಾನಿಗಳು ಮತ್ತು ಶ್ರೀಮತಿ ಅನಂತಲಕ್ಷ್ಮಮ್ಮ ಧಾರ್ಮಿಕ ದಂಪತಿಗಳಿದ್ದರು. ಅವಧಾನಿಗಳು ಸಾಂಪ್ರದಾಯಿಕ ವೇದವಿದ್ವಾಂಸರು. ದಂಪತಿಗಳು ಪುತ್ರಸಂತಾನವನ್ನು ಕೋರಿ ಪ್ರಾರ್ಥನೆಯನ್ನು ಸಲ್ಲಿಸಿದರು.



ಅವಧಾನಿಗಳು ಶ್ರೀರಾಮ–ನವರಾತ್ರಿಯ ಉತ್ಸವವನ್ನು** ಬಹಳ ಉತ್ಸಾಹದಿಂದ ಆಚರಿಸಿ ಗಂಡು ಮಗುವಿನ ತಮ್ಮ ಆಸೆ ಈಡೇರಿದರೆ, ಆ ಮಗುವಿಗೆ ಸೀತೆಯ ಮತ್ತು ರಾಮನ ನಾಮಗಳನ್ನು ಒಳಗೊಂಡ ಹೆಸರನ್ನಿಡುವುದಾಗಿ ಭಗವಂತನಲ್ಲಿ ಪ್ರಾರ್ಥಿಸಿದರು.




ಅನಂತಲಕ್ಷ್ಮಮ್ಮನವರು ಭಕ್ತಿಶ್ರದ್ಧೆಗಳಿಂದ ಕೂಡಿ ಭಗವಂತನಾದ ಆಂಜನೇಯನನ್ನು ಪೂಜಿಸಿ, ತಮಗೆ ಪುತ್ರಸಂತಾನವನ್ನು ದಯೆಪಾಲಿಸಬೇಕೆಂದು ಪ್ರಾರ್ಥಿಸಿದರು.




ಒಂದು ರಾತ್ರಿ ತಮ್ಮ ಕನಸಿನಲ್ಲಿ ಆಂಜನೇಯ ಪ್ರತ್ಯಕ್ಷನಾಗಿ ಮೂರು ಮಾವಿನಹಣ್ಣುಗಳನ್ನು ಕರುಣೆಯಿಂದ ಆಶೀರ್ವದಿಸಿದುದಾಗಿ ಆಕೆ ಕಂಡರು.

# ವೇದ–ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಅದ್ವೈತ ಸಿದ್ಧಾಂತ; * ಆಂಧ್ರಪ್ರದೇಶ, ಭಾರತ;

** ಭಗವಂತ ಶ್ರೀರಾಮನ ಜನ್ಮದಿನವಾದ ಶ್ರೀರಾಮನವಮಿಯಂದು ಮುಕ್ತಾಯಗೊಳ್ಳುವ ಒಂಬತ್ತು ದಿನಗಳ ಉತ್ಸವ.




ಭಗವಂತ ಅವರ ಪ್ರಾರ್ಥನೆಯನ್ನು ಮನ್ನಿಸಿದ. 1951 ಏಪ್ರಿಲ್ 11ರಂದು# ಅವರಿಗೆ ಗಂಡು ಮಗು ಜನಿಸಿತು.




ದಂಪತಿಗಳು ಆ ಹಿಂದೆಯೇ ಸಂಕಲ್ಪಿಸಿದ್ದಂತೆ, ಆ ಮಗುವಿಗೆ ಶುಭ ಮುಹೂರ್ತದಲ್ಲಿ ಸೀತಾರಾಮ ಆಂಜನೇಯುಲು ಎಂಬ ಹೆಸರಿಟ್ಟು ನಾಮಕರಣ ಮಾಡಿದರು.



ಅವಧಾನಿಗಳ ಕುಟುಂಬ ನರಸರಾವುಪೇಟೆಗೆ ತೆರಳಿತು.


ಅಂಬೆಗಾಲಿಡುತ್ತಿದ್ದಾಗಲೂ ಶ್ರೀ ಆಂಜನೇಯುಲುವಿನಲ್ಲಿ ಭಾವಿ ಮಹಿಮೆಯ ಗುಣಲಕ್ಷಣಗಳು ಕಂಡುಬರುತ್ತಿದ್ದವು. ಒಂದು ಮುಂಜಾನೆ ಪುಟ್ಟ ಮಗು ಮಲಗಿದ್ದಾಗ ಅದರ ಮುಖದ ಮೇಲೆ ಬಾನುಂಡೆಯನ್ನು ತಾಯಿ ನೋಡಿದರು.




ಶ್ರೀ ಆಂಜನೇಯುಲುವಿಗೆ ಮೂರು ವರ್ಷವಾಗಿದ್ದಾಗ ಒಮ್ಮೆ ಮಗು ಸಮಾಧಾನಪಡಿಸಲು ಆಗದಂತೆ ಅಳುತ್ತಲೇ ಇತ್ತು.




ತಾಯಿ ಮಗನನ್ನು ಅಲ್ಲೊಂದು ಶಿವನ ದೇವಸ್ಥಾನಕ್ಕೆ* ಕರೆದೊಯ್ದರು. ಇದ್ದಕ್ಕಿದ್ದಂತೆ, ಮಗು ಅಳುವುದನ್ನು ನಿಲ್ಲಿಸಿಬಿಟ್ಟಿದ್ದಲ್ಲದೆ, ಪದೇ ಪದೇ ನುಡಿಯಲಾರಂಭಿಸಿತು ...







# ಖರನಾಮ ಸಂವತ್ಸರ ಚೈತ್ರ–ಶುಕ್ಲ–ಷಷ್ಠಿ, ಮೃಗಶಿರಾ ನಕ್ಷತ್ರಕ್ಕೆ ಅನ್ವಯಿಸುತ್ತದೆ; * ಶ್ರೀ ಭೀಮಲಿಂಗೇಶ್ವರ ದೇವಸ್ಥಾನ.


ಒಂದು ದಿನ ತನ್ನ ತಾಯಿಗೆ ಶ್ರೀ ಅಂಜನೇಯುಲು ಮನೆಯಲ್ಲಿ ಕಂಡುಬರಲಿಲ್ಲ. ಆತಂಕದಿಂದ ಆಕೆ ತನ್ನ ಮಗನನ್ನು ಹುಡುಕುತ್ತಾ ಹೊರಟರು.




ಆಕೆ ಆ ಬಾಲಕನನ್ನು ಹತ್ತಿರದ ಹನುಮಂತನ ದೇವಸ್ಥಾನದಲ್ಲಿ ಕಂಡುಕೊಂಡರು.




ಪುರಾಣಗಳು ಇತ್ಯಾದಿ ಗ್ರಂಥಗಳಿಂದ ಆಯ್ದ ಪ್ರಸಂಗಗಳನ್ನು ಶ್ರೀ ಅವಧಾನಿಗಳು ತಮ್ಮ ಮಗನಿಗೆ ಹೇಳುತ್ತಿದ್ದರು. ಒಮ್ಮೆ ಕೇಳಿದ ಕಥೆ ಬಾಲಕನ ಮನಸ್ಸಿನಲ್ಲಿ ಅಚ್ಚುಳಿಯುತ್ತಿತ್ತು.





ಶ್ರೀ ಅಂಜನೇಯುಲು ವಿದ್ವಾಂಸರೊಬ್ಬರಿಂದ ಸಂಸ್ಕೃತ ಕಲಿಯಲು ಪ್ರಾರಂಭಿಸಿದರು. ಅವರು ಕೆಲವೇ ದಿನಗಳಲ್ಲಿ ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತನಾಡತೊಡಗಿದರು.




ಶ್ರೀ ಆಂಜನೇಯುಲುವಿಗೆ ಏಳು ವರ್ಷವಾಗಿದ್ದಾಗ, ಅವರ ಮಾತಾ-ಪಿತೃಗಳು ಅವರಿಗೆ ಉಪನಯನವನ್ನು ಮಾಡಿದರು.



ಶ್ರೀ ಆಂಜನೇಯುಲು ತಮ್ಮ ನಿತ್ಯಕರ್ಮ ಆಚರಣೆಗಳನ್ನು ನಿರ್ವಹಿಸಲು ಬೇಕಾದ ಮಂತ್ರಗಳನ್ನು ಶ್ರದ್ಧೆಯಿಂದ ಕಲಿತರು ಮತ್ತು ಬ್ರಹ್ಮಚಾರಿಗೆ ವಿಹಿತವಾದ ಶಾಸ್ತ್ರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರು. ಅವರು ಗಾಯತ್ರೀ ಮಂತ್ರ ಜಪಿಸುವುದರಲ್ಲಿ ಬಹಳ ಸಂತೋಷವನ್ನು ಕಂಡುಕೊಂಡರು.




ಶ್ರೀ ಅಂಜನೇಯುಲು ತಮ್ಮ ತಂದೆಯವರಿಂದ ಸ್ವಶಾಖೆಯಾದ ಕೃಷ್ಣ ಯಜುರ್ವೇದವನ್ನು ಕಲಿತರು. ಅವರು 'ಏಕಸಂತ-ಗ್ರಾಹೀ'# ಆಗಿದ್ದರು.




ತಮ್ಮ ತಂದೆಯವರು ಪುರೋಹಿತರಾಗಿ ನೆರೆಹೊರೆಯ ಮನೆಗಳಲ್ಲಿ ಮಾಡಿಸುತ್ತಿದ್ದ ಧಾರ್ಮಿಕ ಕಾರ್ಯ-ಕಲಾಪಗಳನ್ನು ಅವರು ಗಮನಿಸಿದರು ಮತ್ತು ತಮ್ಮ ತಂದೆಯವರಿಗೆ ಅಗತ್ಯವಿದ್ದಾಗ ನೆರವು ನೀಡಿದರು.


ಕಾಲಕ್ರಮೇಣ ಶ್ರೀ ಆಂಜನೇಯುಲು ಕೃಷ್ಣ ಯಜುರ್ವೇದದಲ್ಲಿ ಪ್ರಾವೀಣ್ಯವನ್ನು ಪಡೆದರು. ನಂತರ ಅವರು ಗುಂಟೂರು ಜಿಲ್ಲೆ ವೇದಪ್ರವರ್ಧಕ ವಿದ್ವತ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು.





ಒಂಬತ್ತು ವರ್ಷದವರಾಗಿದ್ದಾಗ, ಅವರು ಶುದ್ಧ ಸಂಸ್ಕೃತದಲ್ಲಿ ಪದ್ಯಗಳನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಹಲವಾರು ಸಂಸ್ಕೃತ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿಕೊಂಡರು.





ಒಂದು ದಿನ ಒಬ್ಬ ವ್ಯಕ್ತಿ ಅವಧಾನಿಗಳನ್ನು ಹುಡುಕಿಕೊಂಡು ಬಂದರು.




ಆದರೆ ಅವಧಾನಿಗಳವರು ಹಿಂತಿರುಗಿ ಬರುವುದು ತಡವಾಯಿತು. ಶ್ರೀ ಆಂಜನೇಯುಲು ಆ ಕಾರ್ಯದಲ್ಲಿ ಪೌರೋಹಿತ್ಯವನ್ನು ಸ್ವತಃ ನಿರ್ವಹಿಸಿದರು.





ಅಲ್ಲಿಯವರೆಗೆ ತಮ್ಮ ತಂದೆಯವರು ಉಪನಯನ ಸಂಸ್ಕಾರದ ಕಲಾಪಗಳನ್ನು ನಡೆಸಿಕೊಟ್ಟದ್ದನ್ನು ಕೆಲವೊಮ್ಮೆ ಮಾತ್ರ ಶ್ರೀ ಅಂಜನೇಯುಲು ಗಮನಿಸಿದ್ದರು.





# ಒಂದೇ ಬಾರಿ ಕಲಿಸಿದ ಯಾವುದನ್ನೂ ಗ್ರಹಿಸುವವರು.


ಶೃಂಗೇರಿ ಶಾರದಾ ಪೀಠದ 35ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು 1961ರಲ್ಲಿ ವಿಜಯವಾಡದಲ್ಲಿ ಮೊಕ್ಕಾಂ ಮಾಡಿದ್ದರು. ಅವರು ಸದ್ಗುಣಗಳ ಅತ್ಯುತ್ತಮ ಪ್ರತೀಕರು, ಶಾಸ್ತ್ರಗಳಲ್ಲಿ ಅನುಪಮ ಪರಿಣತಿಯುಳ್ಳವರು, ಸಿದ್ಧ ಯೋಗಿಗಳು, ಆದರ್ಶ ಜೀವನ್ಮುಕ್ತರು# ಮತ್ತು ದಯೆಯ ಸಾಗರವೇ ಆಗಿದ್ದರು.




ಸ್ಥಳೀಯ ವಿದ್ವಾಂಸರೊಬ್ಬರು ತಮ್ಮೊಂದಿಗೆ ಶ್ರೀ ಆಂಜನೇಯುಲು ಅವರನ್ನು ವಿಜಯವಾಡದಲ್ಲಿ ಜಗದ್ಗುರುಗಳವರ ದಿವ್ಯ ಸನ್ನಿಧಿಗೆ ಕರೆದೊಯ್ದು ಪರಿಚಯಿಸಿದರು.





ಜಗದ್ಗುರುಗಳವರು ಹುಡುಗನೊಂದಿಗೆ ಸಂಸ್ಕೃತದಲ್ಲಿ ಸಂಭಾಷಣೆಯನ್ನು ಆರಂಭಿಸಿದರು. ಸಂಸ್ಕೃತದಲ್ಲಿ ಬಾಲಕನಿಗಿದ್ದ ಪ್ರಾವೀಣ್ಯವನ್ನು ಮತ್ತು ಅವನು ತಪ್ಪಿಲ್ಲದಂತೆ ವೇದವನ್ನು ಪಠಿಸಿದ್ದನ್ನು ಕಂಡು ಅವರು ಮೆಚ್ಚಿದರು.



ಜಗದ್ಗುರುಗಳವರು ಶ್ರೀ ಅಂಜನೇಯುಲುವಿಗೆ ರೇಷ್ಮೆಯ ಶಾಲನ್ನು ಹೊದ್ದಿಸಿ ಆಶೀರ್ವದಿಸಿ ತಮ್ಮ ದಿವ್ಯ ಕಟಾಕ್ಷವನ್ನು ಆತನ ಮೇಲೆ ಬೀರಿದರು.





ಜಗದ್ಗುರುಗಳವರ ಅಪಾರ ಕರುಣೆ ಶ್ರೀ ಆಂಜನೇಯುಲು ಅವರ ಮೇಲೆ ಗಂಭೀರ ಪ್ರಭಾವವನ್ನು ಬೀರಿತು.




# ಜೀವಂತವಾಗಿರುವಾಗಲೇ ಸಂಸಾರಬಂಧನದಿಂದ ಮುಕ್ತರಾದವರು.

ಪರಮಪೂಜ್ಯ ಜಗದ್ಗುರುಗಳವರು ತರುವಾಯ ನರಸರಾವುಪೇಟೆಗೆ ಚಿತ್ತೈಸಿದಾಗ, ಶ್ರೀ ಅಂಜನೇಯುಲು ಅವರ ದರ್ಶನಕ್ಕಾಗಿ ಹೋದರು. ಜಗದ್ಗುರುಗಳವರು ಅವರೊಂದಿಗೆ ಸಂಸ್ಕೃತದಲ್ಲಿ ಸಂಭಾಷಿಸಿದರು.








ಶ್ರೀ ಆಂಜನೇಯುಲು ಸ್ಥಳೀಯ ಪುರಸಭೆಯ ಪ್ರೌಢ ಶಾಲೆಯಲ್ಲಿ ಲೌಕಿಕ ಶಿಕ್ಷಣವನ್ನು ಪಡೆದರು. ಶಿಖೆ ಮತ್ತು ಸಂಪ್ರದಾಯದಂತೆ ಪಂಚೆಯನ್ನು ಧರಿಸಿ ಶಾಲೆಗೆ ಹಾಜರಾಗುತ್ತಿದ್ದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಅವರು, ತಮ್ಮ ತರಗತಿಯಲ್ಲಿ ಸತತವಾಗಿ ಪ್ರಥಮ ಸ್ಥಾನವನ್ನು ಗಳಿಸುತ್ತಿದ್ದರು.



ತರುವಾಯ, ಅವರ ಶಾಲೆಯಲ್ಲಿ ಶಿಕ್ಷಣ ಮಾಧ್ಯಮ ತೆಲುಗಿನಿಂದ ಇಂಗ್ಲಿಷಿಗೆ ಬದಲಾಯಿತು. ಇದರಿಂದಾಗಿ ಕೆಲವು ವಿದ್ಯಾರ್ಥಿಗಳು ಬೇರೆಡೆ ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಆಯಿತು.






ಮುಖ್ಯೋಪಾಧ್ಯಾಯರು ಹೇಳಿದ್ದು ನಿಜವಾಗಿ ನಡೆದುಹೋಯಿತು. ಶ್ರೀ ಆಂಜನೇಯುಲು ಅತ್ಯುತ್ತಮವಾಗಿ ತೇರ್ಗಡೆಯಾಗುತ್ತಾ ಮುಂದುವರೆದರು.

ಅವರು ಸಾರ್ಥಕ ಚಟುವಟಿಕೆಗಳಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಂಡರು. ಅವುಗಳಲ್ಲಿ ನಿತ್ಯಕರ್ಮ-ಆಚರಣೆ, ವೇದ-ಪಠನ, ಸಂಸ್ಕೃತ-ಅಧ್ಯಯನ, ಶಾಲೆಗೆ ಹೋಗಿ ಪ್ರಾಮಾಣಿಕವಾಗಿ ಕಲಿಯುವುದು, ದೇವಾಲಯಗಳಿಗೆ ಹೋಗುವುದು ಮತ್ತು ತಮ್ಮ ತಾಯಿ-ತಂದೆಯವರಿಗೆ ಸಹಾಯ ಮಾಡುವುದು — ಇವೆಲ್ಲವೂ ಸೇರಿದ್ದವು.






# ಸಂನ್ಯಾಸಿಗಳು ಮಳೆಗಾಲದ ಎರಡು ತಿಂಗಳ ಕಾಲ ಒಂದೇ ಸ್ಥಳದಲ್ಲಿ ಉಳಿದು, ಪರತತ್ತ್ವವನ್ನು ಅನುಸಂಧಾನ ಮಾಡುವ ವ್ರತ. ಈ ಅವಧಿಯಲ್ಲಿ, ಅವರು ತಮ್ಮ ಶಿಷ್ಯರಿಗೆ ವಿಶೇಷವಾಗಿ ಆಧ್ಯಾತ್ಮಿಕ ಬೋಧನೆಯನ್ನು ಮಾಡುತ್ತಾರೆ.





# ಭಾರತೀಯ ತರ್ಕಶಾಸ್ತ್ರ.





ಶೃಂಗೇರಿಗೆ ಹಿಂದಿರುಗಿದ ನಂತರ, ಜಗದ್ಗುರುಗಳವರು ಶ್ರೀ ಆಂಜನೇಯುಲು ಅವರಿಗೆ ನ್ಯಾಯಶಾಸ್ತ್ರದ ಗ್ರಂಥಗಳ ಪಾಠವನ್ನು ಹೇಳಲು ಪ್ರಖ್ಯಾತ ನ್ಯಾಯಶಾಸ್ತ್ರ ವಿದ್ವಾಂಸರನ್ನು ನೇಮಕ ಮಾಡಿದರು. ಶ್ರೀ ಆಂಜನೇಯುಲು ಅವರು ತಮಗೆ ಆಯಾ ಬೆಳಗ್ಗೆ ಕಲಿಸಿದ ಗ್ರಂಥ ಭಾಗವನ್ನು ಆಯಾ ಸಂಜೆ ಆ ವಿದ್ವಾಂಸರಿಗೆ ತಪ್ಪದೆ ತಪ್ಪಿಲ್ಲದೆ ಒಪ್ಪಿಸಿದರು. ಅದನ್ನು ಕಂಡವರಿಗೆ ಶ್ರೀ ಆಂಜನೇಯುಲು ವಿದ್ವಾಂಸರಿಗೆ ಪಾಠ ಹೇಳುತ್ತಿದ್ದಂತೆ ಭಾಸವಾಗುತಿತ್ತು! ಅವರ ಗ್ರಹಿಕೆ ಮತ್ತು ವಾಕ್ಪಟುತ್ವ ಅಂತಹದ್ದಾಗಿದ್ದವು.


ಜಗದ್ಗುರುಗಳವರು ಕರುಣೆಯಿಂದ ತಮ್ಮ ಶಿಷ್ಯನನ್ನು ನೋಡಿಕೊಂಡರು ಮತ್ತು ಆತನ ಪ್ರಗತಿಯ ಬಗ್ಗೆ ಗಮನವಹಿಸಿದರು. ತಾವೇ ಸ್ವತಃ ಶ್ರೀ ಅಂಜನೇಯುಲು ಅವರಿಗೆ ಕೆಲವು ಆಯ್ದ ಪ್ರೌಢ ನ್ಯಾಯಶಾಸ್ತ್ರ ಗ್ರಂಥಗಳನ್ನು ಕಲಿಸಿದರು.




ಜಗದ್ಗುರುಗಳವರು ತಾವು ಮಾಡಿ ತೋರಿಸಿದ ಯೋಗಾಸನ ಮತ್ತು ಪ್ರಾಣಾಯಾಮಗಳನ್ನು ಗಮನಿಸಬೇಕೆಂದು ಮತ್ತು ಅವುಗಳನ್ನು ಮಾಡಲು ಕಲಿಯಬೇಕೆಂದು ತಮ್ಮ ಶಿಷ್ಯನಿಗೆ ಹೇಳಿದರು.





ತಮ್ಮ ಕಟ್ಟುನಿಟ್ಟಿನ ದಿನಚರ್ಯೆ, ತೀವ್ರ ವೈರಾಗ್ಯ ಮತ್ತು ನಿಗರ್ವಿತನ – ಇವುಗಳಿಂದಾಗಿ ಬ್ರಹ್ಮಚಾರಿಗಳು ತಮ್ಮ ಸಂಪರ್ಕಕ್ಕೆ ಬಂದ ಎಲ್ಲರ ಮನ ಮುಟ್ಟಿದರು.





ಮಠದ ಭಕ್ತರು ಮೆಚ್ಚುಗೆಯಿಂದ ನಗದು ಅಥವಾ ವಸ್ತುಗಳನ್ನು ಉಡುಗೊರೆಯಾಗಿ ನೀಡಲು ಬಯಸಿದರು. ಆದಾಗ್ಯೂ, ಅವರ ಸಂತೃಪ್ತಿ ಮತ್ತು ವೈರಾಗ್ಯ ಎಷ್ಟರಮಟ್ಟಿಗಿದ್ದವೆಂದರೆ ಅವರು ಯಾರಿಂದಲೂ ಏನನ್ನೂ ಸ್ವೀಕರಿಸಲು ನಿರಾಕರಿಸಿದರು.
















# ಭಾರತಾದ್ಯಂತದ ವಿದ್ವಾಂಸರು ಭಾಗವಹಿಸಿ ಶಾಸ್ತ್ರಗಳಲ್ಲಿನ ವಿವಿಧ ವಿಷಯಗಳ ಬಗ್ಗೆ ಚರ್ಚಿಸುವ ವಾರ್ಷಿಕ ಸಭೆ.





ಮುಂದಿನ ಕೆಲವು ದಿನಗಳಲ್ಲಿ, ಜಗದ್ಗುರುಗಳವರು ತಾವೇ ಸ್ವತಃ ಸಂನ್ಯಾಸಿಯ ದಿನನಿತ್ಯ ಅನುಷ್ಠಾನಗಳನ್ನು ಶಿಷ್ಯಸ್ವಾಮಿಗಳಿಗೆ ಕಲಿಸಿಕೊಟ್ಟರು ಹಾಗೂ ನರಸಿಂಹ, ದಕ್ಷಿಣಾಮೂರ್ತಿ ಮತ್ತು ಶ್ರೀವಿದ್ಯಾ ಮೊದಲಾದ ಅನೇಕ ಮಂತ್ರಗಳ ದೀಕ್ಷೆಯನ್ನು ನೀಡಿದರು.












# ಓಂ ಎಂಬ ಏಕಾಕ್ಷರ ಮಂತ್ರ; * ವೇದಗಳಲ್ಲಿ ಜೀವಾತ್ಮ-ಪರಮಾತ್ಮ ಅಭೇದವನ್ನು ಬೋಧಿಸುವ ಗಹನವಾದ ವಾಕ್ಯಗಗಳು;
** ಗಂಭೀರವಾದ ಧ್ಯಾನಾವಸ್ಥೆ.


ಆಧ್ಯಾತ್ಮಿಕ ತತ್ತ್ವದ ಪ್ರಸಾರ-ಪ್ರಚಾರಕ್ಕಾಗಿ ಆದಿ ಶಂಕರರಿಂದ ಸ್ಥಾಪಿಸಲ್ಪಟ್ಟ ನಾಲ್ಕು ಆಮ್ನಾಯಯ-ಪೀಠಗಳ ಶಂಕರಾಚಾರ್ಯರ ಐತಿಹಾಸಿಕ ಶೃಂಗಸಭೆ 1979ರಲ್ಲಿ ಶೃಂಗೇರಿಯಲ್ಲಿ ನಡೆಯಿತು.




ಆ ಪ್ರಮುಖ ಸಂದರ್ಭದಲ್ಲಿ, ಶಿಷ್ಯಸ್ವಾಮಿಗಳು ತಮ್ಮ ಸಂದೇಶವನ್ನು ಶುದ್ಧ ಸಂಸ್ಕೃತದಲ್ಲಿ ನೀಡಿದರು; ಅದು ಜಗದ್ಗುರುಗಳನ್ನು, ಮತ್ತಿತರ ಮೂವರು ಶಂಕರಾಚಾರ್ಯರನ್ನು ಹಾಗೂ ನೆರೆದಿದ್ದ ಭಕ್ತಜನಸ್ತೋಮವನ್ನು ಮುಗ್ಧಗೊಳಿಸಿತು.



ಶಿಷ್ಯಸ್ವಾಮಿಗಳು ಸ್ವಯಂಪ್ರೇರಿತರಾಗಿ ತಮ್ಮ ಗುರುಗಳವರನ್ನು ಕುರಿತು ಎರಡು ಪದ್ಯಗಳನ್ನು ರಚಿಸಿದರು. ಮೊದಲ ಪದ್ಯದಲ್ಲಿ# ಅವರು ತಮ್ಮ ಗುರುಗಳನ್ನು ಪರಬ್ರಹ್ಮ-ಸ್ವರೂಪ ಮತ್ತು ಮಾನುಷ ಅವತಾರವನ್ನು ತಾಳಿದ ಭಗವಂತ ಎಂದು ವರ್ಣಿಸಿದರು. ಮತ್ತೊಂದರಲ್ಲಿ* ಅವರು ತಮ್ಮ ಗುರುಗಳನ್ನು ಯೋಗದ ಪರಾಕಾಷ್ಠೆಯಾದ ನಿರ್ವಿಕಲ್ಪ-ಸಮಾಧಿಯಲ್ಲಿ ಲೀನರಾಗಿರುವುದನ್ನು ಚಿತ್ರಿಸಿ, ಅವರನ್ನು ಹೀಗೆಂದು ಪ್ರಾರ್ಥಿಸಿದರು...







ಸನಾತನ ಧರ್ಮದ ಪೋಷಣೆ ಮತ್ತು ಪ್ರಸಾರಕ್ಕಾಗಿ ಭಾರತದ ವಿವಿಧ ಭಾಗಗಳಿಗೆ ಜಗದ್ಗುರುಗಳವರು ಕೈಗೊಂಡ ನಾನಾ ಪ್ರವಾಸಗಳಲ್ಲಿ ಶಿಷ್ಯಸ್ವಾಮಿಗಳು ಅವರ ಜೊತೆಗೂಡಿದರು. ಜಗದ್ಗುರುಗಳವರು ತಮ್ಮ ಉತ್ತರಾಧಿಕಾರಿಯಾಗಿ ಶಿಷ್ಯಸ್ವಾಮಿಗಳನ್ನು ಆಯ್ಕೆ ಮಾಡಿದ ನಂತರದ ಮೊದಲ ಪ್ರವಾಸವನ್ನು ರಾಮೇಶ್ವರದ ಶ್ರೀ ರಾಮನಾಥ ಸ್ವಾಮಿಯ ದೇವಾಲಯದ ಕುಂಭಾಭಿಷೇಕಕ್ಕಾಗಿ 1975ರಲ್ಲಿ ಕೈಗೊಂಡರು. ಎರಡು ಅಖಿಲ ಭಾರತ ಪ್ರವಾಸಗಳ ಪೈಕಿ 1977ರಲ್ಲಿ ಕೈಗೊಳ್ಳಲ್ಪಟ್ಟ ಮೊದಲನೆಯ ಯಾತ್ರೆಗೆ ಕಾಶಿಯಲ್ಲಿರುವ ಅನ್ನಪೂರ್ಣೇಶ್ವರಿಯ ದೇವಾಲಯದ ಕುಂಭಾಭಿಷೇಕವು ಚೋದಕವಾಗಿತ್ತು. ಪ್ರತಿಯೊಂದು ಸ್ಥಳದಲ್ಲೂ ಜಗದ್ಗುರುಗಳವರ ಮತ್ತು ಶಿಷ್ಯಸ್ವಾಮಿಗಳ ಅನುಗ್ರಹ ಭಾಷಣಗಳು ಶ್ರೋತೃಗಳನ್ನು ಸಂತೋಷಿಸಿದ್ದು ಮಾತ್ರವಲ್ಲದೆ ಅವರುಗಳನ್ನು ಉದ್ಧಾರಗೊಳಿಸಿದವು.

# ಶ್ರೀ ಅಭಿನವವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್; * ಶ್ರೀ ಗುರು-ಧ್ಯಾನಮ್.


1980ರಲ್ಲಿ ಶಬರಿಮಲೆಯ ಪ್ರವಾಸದ ಸಂದರ್ಭದಲ್ಲಿ, ಶಿಷ್ಯಸ್ವಾಮಿಗಳು ಅಯ್ಯಪ್ಪಸ್ವಾಮಿಯ ಮತ್ತು ತಮ್ಮ ಗುರುಗಳ ಮಹಿಮೆಯನ್ನು ಕೊಂಡಾಡುವ ಸ್ತೋತ್ರದ ಆಶುಕವನವನ್ನು ರಚಿಸಿದರು. ಅದರಲ್ಲೊಂದು ಶ್ಲೋಕದಲ್ಲಿ ಅವರು ಹೇಳಿದರು –





ತಮ್ಮ ಗುರುಗಳವರ ನಿರ್ದೇಶನವನ್ನು ಅನುಸರಿಸಿತ್ತಾ, ಶಿಷ್ಯಸ್ವಾಮಿಗಳು 1983ರಿಂದಲೂ ಸ್ವತಂತ್ರವಾಗಿ ವಿಜಯ ಯಾತ್ರೆಯನ್ನು ಪ್ರಾರಂಭಿಸಿದರು. ಯಾತ್ರೆಯಲ್ಲಿ ನಡೆದ ಸಂಗತಿಗಳನ್ನು ತಮ್ಮ ಗುರುಗಳಿಗೆ ತಾವು ಬರೆದ ಪತ್ರಗಳ ಮೂಲಕ ನಿವೇದಿಸಿದರು.




ಜಗದ್ಗುರುಗಳವರು ತಮ್ಮ ಉತ್ತರಗಳನ್ನು ಕಳುಹಿಸಿ-ಕೊಟ್ಟರು...





ಶಿಷ್ಯನಾದವನು ತನ್ನ ಗುರುವನ್ನು ಅನುಸರಿಸಬೇಕು ಎಂಬ ಶಾಸ್ತ್ರವಿಧಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ, ಶಿಷ್ಯಸ್ವಾಮಿಗಳು ನಡೆದುಕೊಂಡರು. ಜಗದ್ಗುರುಗಳವರ ಹಾಗೂ ಶಿಷ್ಯಸ್ವಾಮಿಗಳ ನುಡಿಗಳ ನಡುವಿನ ಸಾಮ್ಯವನ್ನು ಜನರು ಗಮನಿಸಿದರು.




ಒಮ್ಮೆ ಕೆಲವು ವರದಿಗಾರರು ಜಗದ್ಗುರುಗಳವರನ್ನು ಮತ್ತು ಶಿಷ್ಯಸ್ವಾಮಿಗಳನ್ನು ಪ್ರತ್ಯೇಕವಾಗಿ ಸಂದರ್ಶಿಸಿದರು. ನಂತರ ಅವರು ಹೇಳಿದರು –





ಜಗದ್ಗುರುಗಳವರ ಮತ್ತು ಅವರ ಶಿಷ್ಯರ ನಡುವಿನ ಸಂಬಂಧವನ್ನು ಮೆಚ್ಚಿ, ಹೆಸರಾಂತ ವಿದ್ವಾಂಸರಾದ ಡಾ. ಮಂಡನ ಮಿಶ್ರ ಒಮ್ಮೆ ಜಗದ್ಗುರುಗಳಿಗೆ ಹೇಳಿದರು –




ಪರಿಪೂರ್ಣತೆಯ ಸಾರವೇ ಆದ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು 1989 ಸೆಪ್ಟೆಂಬರ್ 21ರಂದು ತಮ್ಮ ಕಣ್ಣುಗಳನ್ನು ಮುಚ್ಚಿ ಕುಳಿತಂತೆಯೇ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಅನಂತ ಪರಬ್ರಹ್ಮದೊಂದಿಗೆ ಪರಿಪೂರ್ಣವಾಗಿ ಒಂದಾದರು.





ಮರುದಿನ, ಜಗದ್ಗುರುಗಳವರ ಪಾರ್ಥಿವ ಶರೀರವನ್ನು ಸಮಾಧಿ ಮಾಡಿದ ನಂತರ, ಶಿಷ್ಯಸ್ವಾಮಿಗಳು ಆ ಸಮಾಧಿ ಸ್ಥಳದಲ್ಲಿ# ಮಣ್ಣಿನಿಂದ ನಿರ್ಮಿತವಾದ ಲಿಂಗವನ್ನು ಶಾಸ್ತ್ರೋಕ್ತವಾಗಿ ಪೂಜಿಸಿದರು.

ತಮ್ಮ ಸಾರ್ವಜನಿಕ ಭಾಷಣದಲ್ಲಿ, ಅವರು ಹೇಳಿದರು –




ಜಗದ್ಗುರುಗಳವರ ಅಪಾರ ಮಹಿಮೆಯನ್ನು ಕುರಿತು ಶಿಷ್ಯಸ್ವಾಮಿಗಳು ರಚಿಸಿದ ನಮನ ಶ್ಲೋಕವೊಂದನ್ನು ಮತ್ತು ಅಷ್ಟೋತ್ತರ-ಶತನಾಮಾವಳಿಯನ್ನು* ಸಕಲ ಭಕ್ತರಿಗೆ ಲಭ್ಯವಿರುವಂತೆ ಮಾಡಲಾಯಿತು.

1989 ಅಕ್ಟೋಬರ್ 19ರಂದು ಪರಮಪೂಜ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಶೃಂಗೇರಿ ಶ್ರೀ ಶಾರದಾ ಪೀಠದ 36ನೇ ಜಗದ್ಗುರು ಶಂಕರಾಚಾರ್ಯರಾಗಿ ಪಟ್ಟಾಭಿಷಿಕ್ತರಾದರು.




ಮಹಾಸ್ವಾಮಿಗಳನ್ನು ಶ್ರೀಮಠದ ಆಡಳಿತಾಧಿಕಾರಿಗಳು ಶಾರದಾಂಬೆಯ ದೇವಾಲಯದ ಗರ್ಭಗೃಹಕ್ಕೆ ಗೌರವಗಳೊಂದಿಗೆ ಕರೆತಂದರು.



# ಗುರುಗಳವರ ಪಾರ್ಥಿವ ಶರೀರವನ್ನು ಭೂಗತಗೊಳಿಸಿದ ಪವಿತ್ರ ಸ್ಥಳ; * 108 ಪವಿತ್ರ ನಾಮಗಳ ಸರಣಿ.

ಮಹಾಸ್ವಾಮಿಗಳ ದಿನಚರ್ಯೆ ಬಹಳ ನಿಬಿಡ. ಅವರು ಬೆಳಗ್ಗೆ 4 ಗಂಟೆಗೂ ಮೊದಲು ಸ್ನಾನ ಮಾಡಿ ತಮ್ಮ ಬೆಳಗಿನ ಅನುಷ್ಠಾನವನ್ನು# ಮಾಡುತ್ತಾರೆ. ಆ ಬಳಿಕ, ತಮ್ಮ ಗುರುಗಳವರ ಪವಿತ್ರ ಪಾದುಕೆಗಳನ್ನು ಪೂಜಿಸುತ್ತಾರೆ ಮತ್ತು ಅವರ ಸಮಾಧಿ-ಮಂದಿರದಲ್ಲಿ ದರ್ಶನ ಪಡೆಯುತ್ತಾರೆ. ನಂತರ ಅವರು ಖಾಸಗಿಯಾಗಿ ಸ್ವಲ್ಪ ಸಮಯ ಶಾಸ್ತ್ರಗ್ರಂಥಗಳ ಅವಲೋಕನವನ್ನು ಮಾಡುತ್ತಾ ಆನಂದಿಸುತ್ತಾರೆ.




ಬೆಳಗ್ಗೆ 10:30ರ ಸುಮಾರಿಗೆ ಅವರು ನೆರೆದ ಎಲ್ಲ ಭಕ್ತರಿಗೆ ದರ್ಶನ ನೀಡುತ್ತಾರೆ, ಅವರೊಂದಿಗೆ ಸಂವಹನ ನಡೆಸುತ್ತಾರೆ ಮತ್ತು ಅವರನ್ನು ಆಶೀರ್ವದಿಸುತ್ತಾರೆ.

ಅವರು ಪ್ರತಿ ಶುಕ್ರವಾರ ಶ್ರೀಮಠದಲ್ಲಿನ ದೇವಾಲಯಗಳಿಗೆ ತೆರಳುತ್ತಾರೆ. ವಿಶೇಷವಾಗಿ ಶಾರದೆಯ ದೇಗುಲದಲ್ಲಿ ಸ್ವಲ್ಪ ಸಮಯ ವಿನಿಯೋಗಿಸುತ್ತಾರೆ.


ಮಧ್ಯಾಹ್ನ 12:30ರ ಹೊತ್ತಿಗೆ ಅವರು ದಿನದ ಎರಡನೇ ಸ್ನಾನ ಮುಗಿಸಿ ಮಧ್ಯಾಹ್ನದ ಆಹ್ನಿಕವನ್ನು ಮಾಡುತ್ತಾರೆ. ಇದರ ನಂತರವೇ ಅವರು ಭಿಕ್ಷೆಯನ್ನು* ಸ್ವೀಕರಿಸುತ್ತಾರೆ.

ಸಂಜೆ 5:30ರ ಸುಮಾರಿಗೆ ಸಾರ್ವಜನಿಕರಿಗೆ ದರ್ಶನವನ್ನು ನೀಡುತ್ತಾರೆ. ವಿಶೇಷ ದಿನಗಳಲ್ಲಿ ಆಶೀರ್ವಚನಗಳನ್ನು ನೀಡುತ್ತಾರೆ. ಮಹಾಸ್ವಾಮಿಗಳು ಮತ್ತೊಮ್ಮೆ ಸ್ನಾನ ಮಾಡಿ ತಮ್ಮ ಸಂಜೆಯ ಅನುಷ್ಠಾನವನ್ನು ಮಾಡುತ್ತಾರೆ.

ಅಪರಾಹ್ನ 4 ಗಂಟೆ ಸುಮಾರಿಗೆ, ಅವರು ಭಕ್ತರಿಂದ ಬಂದ ಪತ್ರಗಳನ್ನು ಮತ್ತು ಅಗತ್ಯವಿದ್ದರೆ, ಮಠದ ವ್ಯವಹಾರಗಳನ್ನು ಗಮನಿಸುತ್ತಾರೆ.




ರಾತ್ರಿ 8:30ಕ್ಕೆ ಮಹಾಸ್ವಾಮಿಗಳು ಚಂದ್ರಮೌಳೀಶ್ವರ ಪೂಜೆಯನ್ನು ಮಾಡುತ್ತಾರೆ. ಇದಲ್ಲದೆ, ಪ್ರತಿ ಶುಕ್ರವಾರದಂದು ಶ್ರೀಚಕ್ರ ಅರ್ಚನೆಯನ್ನು ಮಾಡುತ್ತಾರೆ. ಸ್ವಲ್ಪ ಸಮಯದವರೆಗೆ ಶಾಸ್ತ್ರಗ್ರಂಥಗಳನ್ನು ಅವಲೋಕಿಸಿದ ನಂತರ ರಾತ್ರಿ 11 ಗಂಟೆಗೆ ವಿಶ್ರಮಿಸುತ್ತಾರೆ.




# ಶಾಸ್ತ್ರವಿಹಿತ ವಿಧಿವಿಧಾನಗಳು; * ಆಹಾರ.


ಮಹಾಸ್ವಾಮಿಗಳು ಶಾಸ್ತ್ರಗಳಲ್ಲಿ ಅತ್ಯಂತ ತಜ್ಞರೆಂದು ವ್ಯಾಪಕವಾಗಿ ಗೌರವಿಸಲ್ಪಡುತ್ತಾರೆ. ಭಾರತದ ಎಲ್ಲೆಡೆಯಿಂದ ಆಗಮಿಸಿದ ವಿದ್ವಾಂಸರು ಭಾಗವಹಿಸುವ, ಶೃಂಗೇರಿಯಲ್ಲಿ ನಡೆಯುವ, ವಾರ್ಷಿಕ ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆಯಲ್ಲಿ ಅವರು ಅಧ್ಯಕ್ಷತೆಯನ್ನು ವಹಿಸಿ ಶಾಸ್ತ್ರಾರ್ಥ ಚರ್ಚೆಯನ್ನು ನಿರ್ವಹಿಸುತ್ತಾರೆ.



ಮಹಾಸ್ವಾಮಿಗಳ ಶಾಸ್ತ್ರಪಾಂಡಿತ್ಯವು ಪಂಡಿತರನ್ನು ಎಂದಿಗೂ ವಿಸ್ಮಯಗೊಳಿಸದೆ ಉಳಿದಿಲ್ಲ. ಸಮಕಾಲೀನ ಪ್ರಖ್ಯಾತ ವಿದ್ವಾಂಸರೊಬ್ಬರು ಒಮ್ಮೆ ನುಡಿದರು –





ತಮ್ಮ ಕಾರ್ಯಗಳಲ್ಲಿ ಬಿಗಿಯಾಗಿ ಸಮಯದ ಒತ್ತಡವಿದ್ದಾಗ್ಯೂ, ಮಹಾಸ್ವಾಮಿಗಳು ಶಾಸ್ತ್ರಗಳಿಗೆ ಸಂಬಂಧಪಟ್ಟ, ವಿಶೇಷವಾಗಿ ವೇದಾಂತದ, ಅಪ್ರಕಾಶಿತ ಮತ್ತು ಪುರಾತನ ಓಲೆಗರಿ ಕರಡು ಪ್ರತಿಗಳನ್ನು ಪರಿಶ್ರಮ ವಹಿಸಿ ಪರಿಶೀಲಿಸುತ್ತಾರೆ, ವಿಮರ್ಶಾತ್ಮಕವಾಗಿ ಸಂಪಾದಿಸುತ್ತಾರೆ ಮತ್ತು ಮಠದ ಸಂಶೋಧನಾ ಕೇಂದ್ರದ ಮೂಲಕ ಪ್ರಕಟಪಡಿಸುತ್ತಾರೆ.




ತಮ್ಮ ಗುರುಗಳನ್ನು ಕುರಿತಾದ ಸ್ತೋತ್ರಗಳನ್ನು ಮಾತ್ರವಲ್ಲದೆ, ಹಿಂದಿನ ಜಗದ್ಗುರುಗಳನ್ನು ಮತ್ತು ದೇವತೆಗಳನ್ನು ಕುರಿತು ಹಲವಾರು ಭಕ್ತಿ ಕವಿತೆಗಳನ್ನು ಅವರು ರಚಿಸಿದ್ದಾರೆ. ಅವುಗಳು ಅರ್ಥಗರ್ಭಿತ ಮತ್ತು ಸೊಬಗಿನಿಂದ ತುಂಬಿವೆ.



ಮಹಾಸ್ವಾಮಿಗಳು ಬಹುಭಾಷಿಗಳು. ಅವರು ಶುದ್ಧ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಮತ್ತು ಹಿಂದೀ ಭಾಷೆಗಳಲ್ಲಿ ನಿರರ್ಗಳವಾಗಿ ಪ್ರವಚನ ನೀಡುತ್ತಾರೆ. ಅವರ ಭಾಷಣಗಳು ಅತಿ ತಿಳಿಯಾಗಿ, ಅರ್ಥಗರ್ಭಿತವಾಗಿ ಮತ್ತು ಅನಾಯಾಸವಾಗಿ ಹರಿದು ಬರುತ್ತವೆ. ಅವರ ಆದರ್ಶಪ್ರಾಯವಾದ ವಿದ್ವತ್ತಿನ ಹಾಗೂ ಬೆರಗುಗೊಳಿಸುವ ನೆನೆಪಿನ ಶಕ್ತಿಯ ಮೊಹರು ಅವುಗಳಲ್ಲಿ ಅನಿವಾರ್ಯವಾಗಿ ಕಂಡುಬರುತ್ತದೆ.







ಅವರು ನ್ಯಾಯ ಮತ್ತು ವೇದಾಂತ ಶಾಸ್ತ್ರಗಳನ್ನು ಹಲವಾರು ಪರ್ಯಾಯಗಳಲ್ಲಿ ಪಾಠ ಹೇಳಿದ್ದಾರೆ. ಒಂದು ಶಾಸ್ತ್ರವನ್ನು ಕಲಿಸಲು ವರ್ಷಗಳು ಹಿಡಿಯುತ್ತವೆ.


ಪ್ರವಾಸದಲ್ಲಿದ್ದಾಗ ಅವರ ಮೇಲೆ ಸಮಯದ ಒತ್ತಡ ಅತಿಯಾಗಿದ್ದರೂ ಕೂಡ, ಅವರು ತಮ್ಮ ತರಗತಿಗಳನ್ನು, ಅದರಲ್ಲೂ ತಪ್ಪದ ಕ್ರಮಬದ್ಧತೆಯೊಂದಿಗೆ, ಮುಂದುವರೆಸಿದರು. ಶಾಸ್ತ್ರಗಳನ್ನು ಕಲಿಸುವುದಕ್ಕೆ ಅವರು ಬಹಳ ಮಹತ್ತ್ವ ನೀಡುತ್ತಾರೆ.

ಅವರು ಒಂದು ಕ್ಲಿಷ್ಟವಾದ ಪ್ರಬಂಧವನ್ನು ಮುನ್ನೆಣಿಸದೆ ಎತ್ತಿಕೊಂಡು ಅದರ ನಿಖರವಾದ ಅನುವಾದವನ್ನು, ತಾವು ಆ ವಿಷಯವನ್ನು ಓದಿ ಹೇಳುತ್ತಿದ್ದಾರೆ ಅಷ್ಟೆ ಎಂದು ಶ್ರೋತೃಗಳಿಗೆ ಭಾಸವಾಗುವಂತೆ, ವಿಸ್ಮಯಗೊಳಿಸುವ ರೀತಿಯಲ್ಲಿ ಒಡನೆಯೇ ನಿರೂಪಿಸಬಲ್ಲರು.


ಅದೇ ರೀತಿಯಲ್ಲಿ, ಮಹಾಸ್ವಾಮಿಗಳು ಶಾಸ್ತ್ರೀಯ ತತ್ತ್ವಗಳನ್ನು ಪಂಡಿತರಿಗೆ ಪಾರಿಭಾಷಿಕವಾಗಿ, ಶ್ರೀಸಾಮಾನ್ಯರಿಗೆ ಲಲಿತ ಶೈಲಿಯಲ್ಲಿ ಆದರೂ ಸರಿಯಾದ ತಾತ್ಪರ್ಯಕ್ಕೆ ಧಕ್ಕೆ ಬಾರದಂತೆ, ಪ್ರತಿಪಾದಿಸುತ್ತಾರೆ. ಭಕ್ತನೊಬ್ಬ ಒಮ್ಮೆ ಕೇಳಿದ –






ಇನ್ನೊಬ್ಬ ಶಿಷ್ಯ ಕೇಳಿದ –





ಒಬ್ಬ ಭಕ್ತ ತನ್ನ ಸಮಸ್ಯೆಯನ್ನು ಪರಮಪೂಜ್ಯರ ಮುಂದಿಟ್ಟ –
ಯಾವಾಗಲೂ ಭಗವಂತನ ಚಿಂತನೆಯನ್ನು ಮಾಡಿದ್ದಾಗ್ಯೂ, ನಾನು ಹೋದಲ್ಲೆಲ್ಲಾ ತೊಡಕುಗಳು ನನ್ನನ್ನು ಕಾಡುತ್ತವೆ.
ದೇವರ ಕಡೆಗೆ ತನ್ನ ಮನಸ್ಸನ್ನು ಮೂಡಿಸಿದ ವ್ಯಕ್ತಿ ಪ್ರಾಪಂಚಿಕ ತೊಂದರೆಗಳಿಂದ ವಿಚಲಿತನಾಗಲು ಸಾಧ್ಯವೇ?
ಚಿಂತಿಸಬೇಡ. ಎಡರು–ತೊಡರುಗಳನ್ನು ನ್ಯಾಯಸಮ್ಮತವಾಗಿ ದೇವರಿಂದ ವಿಧಿಸಲ್ಪಟ್ಟಿರುವುವು ಎಂದು ಕಾಣು ಮತ್ತು ಆ ಸಮಸ್ಯೆಗಳನ್ನು ಬಗೆಹರಿಸಲು ದೇವರು ನಿನಗೆ ಶಕ್ತಿಯನ್ನು ನೀಡುತ್ತಾನೆ ಎಂಬ ವಿಶ್ವಾಸವನ್ನು ಬೆಳೆಸಿಕೊ.
ಅಪ್ಪಣೆಯಾದಂತೆ ನಾನು ನನ್ನ ಮನೋಭಾವವನ್ನು ತಿದ್ದಿಕೊಳ್ಳುತ್ತೇನೆ.
ಒಮ್ಮೆ ದಂಪತಿಗಳೊಬ್ಬರು ಶೃಂಗೇರಿಗೆ ಭೇಟಿ ನೀಡಿದರು. ಹೆಂಡತಿ ಮಹಾಸ್ವಾಮಿಗಳಲ್ಲಿ ಗೋಳಿಟ್ಟಳು –
ನಾನು ದೊಡ್ಡ ಕುಟುಂಬವನ್ನು ನೋಡಿಕೊಳ್ಳಬೇಕು. ಆದ್ದರಿಂದ ನನಗೆ ನೆಮ್ಮದಿಯಿಂದ ಕುಳಿತು ದೇವರ ಪ್ರಾರ್ಥನೆಯನ್ನು ಮಾಡಲು ಸಮಯ ಸಿಗುತ್ತಿಲ್ಲ. ನಾನು ದೀನಳಾಗಿದ್ದೇನೆ. ನನಗೆ ದಾರಿ ಇದೆಯೇ?
ಇಲ್ಲವೇಕೆ? ದೇವರನ್ನು ಆರಾಧಿಸಲು ನಿಮಗೆ ಹೆಚ್ಚಿನ ಅವಕಾಶವವಿರುವುದು ನನಗೆ ಕಂಡುಬರುತ್ತಿದೆ.
ತಾಯಿ ಶಾರದಾಂಬೆ ಯಾವಾಗಲೂ ನಿಮ್ಮ ಹೃದಯ ಕಮಲದಲ್ಲಿ ನೆಲೆಸಿರುವಳೆಂದು ಭಾವಿಸಿ. ನೀವು ಬೆಳಗ್ಗೆ ಎದ್ದಾಗ, ಆಕೆಯನ್ನು ಎಬ್ಬಿಸುತ್ತೀರಿ ಎಂದು ಕಲ್ಪಿಸಿಕೊಳ್ಳಿ. ನೀವು ತಿನ್ನಲು ಕುಳಿತಾಗ, ಆಹಾರವನ್ನು ಅಮ್ಮನವರಿಗೆ ಅರ್ಪಿಸಿ. ಮನೆಯ ಕೆಲಸಗಳನ್ನು ಮಾಡುವಾಗ, ಆಕೆ ನಿಮ್ಮೊಂದಿಗೆ ಇದ್ದಾಳೆ ಎಂದು ಭಾವಿಸಿ.
ಸಮಯ ಸಿಕ್ಕಾಗ, ಕಣ್ಮುಚ್ಚಿ ಜಗನ್ಮಾತೆಗೆ ಮಾನಸಿಕ ಪೂಜೆಯನ್ನು ಮಾಡಿ. ನಿಮ್ಮ ಸಮಸ್ಯೆಗಳನ್ನು ಆಕೆಯಲ್ಲಿ ತೋಡಿಕೊಳ್ಳಿ ಮತ್ತು ಆಕೆಯ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿ. ಈ ರೀತಿಯಾಗಿ ವರ್ತಿಸಿ ನೀವು ಮಾತೆಯ ಅನುಗ್ರಹವನ್ನು ಹೇರಳವಾಗಿ ಪಡೆಯುವಿರಿ.


ಶಿಷ್ಯರೊಬ್ಬರ ಮನೆಯಲ್ಲಿ ಪಾದಪೂಜೆಯು# ಸಾಗುತ್ತಿತ್ತು. ನೈವೇದ್ಯವನ್ನು ತಂದಿಟ್ಟಾಗ, ಅದು ಬಹಳ ಬಿಸಿಯಾಗಿರುವುದನ್ನು ಮಹಾಸ್ವಾಮಿಗಳು ಗಮನಿಸಿದರು. ಅವರು ಮುನ್ನೆಣಿಸದೆ ತಮ್ಮ ಹತ್ತಿರವಿದ್ದ ಫ್ಯಾನನ್ನು ಅದರತ್ತ ತಿರುಗಿಸಿದರು.





ಗಾಳಿಯು ನೈವೇದ್ಯವನ್ನು ತಣ್ಣಗಾಗಿಸುತ್ತಿದ್ದಾಗ, ಪರಮಪೂಜ್ಯರು ಲಲಿತಾ ಸಹಸ್ರನಾಮದಲ್ಲಿ* ಬರುವ ಜಗನ್ಮಾತೆಯ ಒಂದು ನಾಮದ ಸ್ಪಷ್ಟ ವಿವರಣೆಯನ್ನು ನೀಡಿದರು.




ಆ ಭಕ್ತರು ನಂತರ ಹೇಳಿದರು –





ಅವರಿಗೆ ಪೂಜೆಯ ವಿಗ್ರಹಗಳು ಕೇವಲ ಜಡ ವಸ್ತುಗಳಲ್ಲ. ಪೂಜೆ ಮಾಡುವಾಗ ಪೂಜಿಸಲ್ಪಡುವ ವಿಗ್ರಹದಲ್ಲಿ ದೇವರ ಜೀವಂತ ಸಾನ್ನಿಧ್ಯವನ್ನು ನಾವು ಅನುಭವಿಸಬೇಕು ಎಂದು ಅವರು ಒತ್ತಿ ಹೇಳುತ್ತಾರೆ.





ಒಬ್ಬ ವ್ಯಕ್ತಿ ಪರಮಪೂಜ್ಯ ಗುರುಗಳೊಂದಿಗೆ ಸಂಭಾಷಿಸುತ್ತಿದ್ದ.









# ದಿವ್ಯ ಮಾತೆಯ ಪವಿತ್ರ ಪಾದುಕೆಗಳ ಪೂಜೆ; * ಜಗನ್ಮಾತೆಯ 1008 ನಾಮಗಳು.


ನಾನು ಕೇಳಿದ್ದು ನಿನ್ನ ಲೌಕಿಕ ಸಂಪತ್ತಿನ ಬಗ್ಗೆ ಅಲ್ಲ. ಆಯುಸ್ಸು ಕೊನೆಗೊಂಡಾಗ ಮನುಷ್ಯ ತನ್ನ ಎಲ್ಲ ಸಂಪತ್ತನ್ನೂ ಕಡ್ಡಾಯವಾಗಿ ಬಿಟ್ಟು ಹೋಗಬೇಕಾಗುತ್ತದೆ.
ಗುರುಗಳೆ, ಹಾಗಾದರೆ ನಾನು ನನಗೋಸ್ಕರ ಏನನ್ನು ಸಂಪಾದಿಸಿ ಕೂಡಿಡಬೇಕು?
ನೀನು ಪುಣ್ಯವನ್ನು ಸಂಗ್ರಹಿಸಬೇಕು. ಅದು ಶಾಸ್ತ್ರವಿಹಿತ ಸ್ವಧರ್ಮದ ಆಚರಣೆ, ಸತ್ಪಾತ್ರರಲ್ಲಿ ದಾನ ಇತ್ಯಾದಿಗಳಿಂದ ಅರ್ಜಿತವಾಗುತ್ತದೆ. ಅದು ನಿಜವಾದ ಸಂಪತ್ತು. ಅದನ್ನು ಹೆಚ್ಚಾಗಿ ಸಂಪಾದಿಸು.
ತಾವು ನನ್ನ ಕಣ್ಣುಗಳನ್ನು ತೆರೆದಿದ್ದೀರಿ, ಗುರುಗಳೆ. ತಮ್ಮ ಆದೇಶದಂತೆ ನಾನು ನಡೆದುಕೊಳ್ಳುತ್ತೇನೆ.
ತಮ್ಮ ಒಂದು ಪ್ರವಚನದಲ್ಲಿ ಮಹಾಸ್ವಾಮಿಗಳು ಒಂದು ಶ್ಲೋಕವನ್ನು ಉಲ್ಲೇಖಿಸಿ, ಧರ್ಮ ಹೇಗೆ ಸಹಾಯಕವಾಗುತ್ತದೆ ಎಂದು ಉಪದೇಶಿಸಿದರು–
ಧರ್ಮವನ್ನು ಎತ್ತಿಹಿಡಿಯುವ ವ್ಯಕ್ತಿಯ ಸಹಾಯಕ್ಕೆ ಪ್ರಾಣಿಗಳು ಸಹ ಬರುತ್ತವೆ; ಆದರೆ ತಪ್ಪಾದ ಹಾದಿಯಲ್ಲಿ ನಡೆವ ವ್ಯಕ್ತಿಯನ್ನು ತನ್ನ ಸಹೋದರನೂ ತ್ಯಜಿಸುತ್ತಾನೆ.
ರಾಮನಿಗೆ ಕೋತಿಗಳು ಸಹ ಸಹಾಯ ಮಾಡಿದ್ದವು.
ರಾವಣನ ಕೈಬಿಟ್ಟ ಅವನ ತಮ್ಮ ವಿಭೀಷಣ, ರಾಮನಲ್ಲಿ ಶರಣಾಗಿ ಬಂದ.
ಅವರು ಶಿಷ್ಯನೋಬ್ಬನಿಗೆ ಸಲಹೆ ನೀಡಿದರು –
ಕೆಲವರು ದೇವರಿಗಾಗಿ ಸ್ವಲ್ಪ ಸಮಯವನ್ನೂ ವಿನಿಯೋಗಿಸಲು ಸಾಧ್ಯವಿಲ್ಲ ಎಂದು ಹೇಳಿಕೊಳ್ಳುತ್ತಾರೆ. ಇದನ್ನು ಒಪ್ಪಲಾಗದು. ಮಿಕ್ಕೆಲ್ಲವುದಕ್ಕೂ ಅವರಿಗೆ ಸಮಯವಿದೆ ಎಂದು ತೋರುತ್ತದೆ. ಭಗವಚ್ಚಿಂತನೆಯಲ್ಲಿ ಪ್ರತಿದಿನ ಕನಿಷ್ಠ ಕೆಲವು ನಿಮಿಷಗಳನ್ನಾದರೂ ವಿನಿಯೋಗಿಸಿ. ನೀವು ಮನಶ್ಶಾಂತಿ ಮತ್ತು ಆನಂದವನ್ನು ಅನುಭವಿಸುವಿರಿ.
ನಿಮ್ಮ ಮಕ್ಕಳು ಒಳ್ಳೆಯ ಕಾರ್ಯಗಳನ್ನು ಮಾಡಬೇಕೆಂದು ನೀವು ಬಯಸಿದ್ದೇ ಆದರೆ, ನೀವು ಮೊದಲು ಆ ಕಾರ್ಯಗಳನ್ನು ಮಾಡಬೇಕು. ನಿಮ್ಮ ಮಕ್ಕಳಿಗೆ ನೀವು ಆದರ್ಶವಾಗಿರಿ.





#GLIMPSES OF GRACE, 2002, ಪುಟ 11.



ಒಬ್ಬ ಶಿಷ್ಯ ಒಮ್ಮೆ, "ದೇವರು ನಮ್ಮನು ಹೇಗೆ ಅನುಗ್ರಹಿಸುತ್ತಾನೆ?" ಎಂದು ಕೇಳಿದ.
ಯಾವುದೇ ಪ್ರಯತ್ನದಲ್ಲಿ ಸರಿಯಾದ ಆಲೋಚನೆಗಳ ಮೂಲಕ ಮಾತ್ರವೇ ಯಶಸ್ಸನ್ನು ಸಾಧಿಸಬಹುದು ಎಂಬುದು ತಿಳಿದ ವಿಷಯ. ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಸೂಕ್ತವಾದ ಆಲೋಚನೆಗಳನ್ನು ಉಂಟುಮಾಡುವ ಮೂಲಕ, ದೇವರು ಅವನನ್ನು ಅನುಗ್ರಹಿಸುತ್ತಾನೆ ಎಂದು ಶಾಸ್ತ್ರಗಳು ತಿಳಿಸುತ್ತವೆ.
ಮತ್ತೊಂದು ಸಂಶಯ –
ಸಂಸಾರ ಬಂಧನದಿಂದ ಬಿಡುಗಡೆ ಹೊಂದಲು ಒಬ್ಬ ವ್ಯಕ್ತಿ ಯಾವಾಗಲೂ ತನ್ನ ಗುರುಗಳ ಬಳಿ ಇದ್ದುಕೊಂಡು, ಅವರಿಗೆ ಸೇವೆ ಸಲ್ಲಿಸಬೇಕಾದುದು ಅನಿವಾರ್ಯವಲ್ಲವೇ?
ಇಲ್ಲ, ಅದು ಅನಿವಾರ್ಯವಲ್ಲ. ನಿಮ್ಮ ಗುರುಗಳು ನಿನಗೆ ಏನನ್ನು ಮಾಡಬೇಕೆಂದು ಅಪ್ಪಣೆ ಮಾಡಿದ್ದಾರೋ, ಅದನ್ನು ನೀನು ಪ್ರಾಮಾಣಿಕವಾಗಿ ಮಾಡುವುದು ಅಗತ್ಯ. ಅದುವೇ ಗುರುಗಳಿಗೆ ನೀನು ಸಲ್ಲಿಸಬಹುದಾದ ಅತ್ಯುತ್ತಮ ಸೇವೆ.
ವೇದಗಳ ಮತ್ತು ಮುಕ್ತಿಯ ಬಗ್ಗೆ –
ಗುರುಗಳೆ, ಬ್ರಹ್ಮವನ್ನು ಹೊರತುಪಡಿಸಿ ಎಲ್ಲವೂ ಮಿಥ್ಯೆ, ವಾಸ್ತವವಲ್ಲ, ಎಂದು ಅದ್ವೈತಿಗಳು ವಾದಿಸುತ್ತಾರೆ. ಅದು ಸರಿಯಾದರೆ, ವೇದಗಳು ಸಹ ಸುಳ್ಳಾಗಿರಬೇಕು. ವೇದಗಳು ಮಿಥ್ಯೆ ಆದರೆ, ಅವುಗಳಿಂದ ವಾಸ್ತವವಾದ ಜ್ಞಾನವು ಲಭಿಸುವುದು ಹೇಗೆ?
ಈ ಕಥೆಯನ್ನು ಗಮನಿಸಿ. ಒಬ್ಬ ವ್ಯಕ್ತಿ ತಾನು ತಿಂದ ಆಹಾರ ವಿಷಮಿಶ್ರಿತ ಎಂಬ ಧೃಢ ಭಾವಾವೇಶಕ್ಕೆ ಒಳಗಾಗಿದ್ದ; ಆದರೆ ಆ ಆಹಾರ ವಿಷಮಿಶ್ರಿತವಾಗಿರಲಿಲ್ಲ.
ಅವನ ಭಾವೋದ್ರೇಕದ ಯಾತನೆ ಅದೆಷ್ಟು ತೀವ್ರವಾಗಿತ್ತೆಂದರೆ, ಅವನು ಶೀಘ್ರದಲ್ಲೇ ಕುಸಿದು ಸತ್ತುಹೋದ. ಕಾಲ್ಪನಿಕ ವಿಷ ನಿಜವಾದ ಸಾವಿಗೆ ಕಾರಣವಾಯಿತು. ಅಂತೆಯೇ, ಪಾರಮಾರ್ಥಿಕ ನಿಲುವಿನಲ್ಲಿ ವೇದಗಳು ಸತ್ಯವೆಂದು ಪರಿಗಣಿಸಲ್ಪಡದಿದ್ದರೂ, ಮುಕ್ತಿಕೊಡುವ ಜ್ಞಾನವನ್ನು ನೀಡಬಲ್ಲವು.
ಪ್ರಪಂಚ ವಾಸ್ತವವಲ್ಲ ಎಂಬ ವಿಷಯವಾಗಿ –
ನಾವು ಪ್ರಪಂಚವನ್ನು ನೋಡುತ್ತೇವೆ ಮತ್ತು ಜನರೊಂದಿಗೆ ವ್ಯವಹರಿಸುತ್ತೇವೆ. ಆದರೆ ಇದು ನಿಜಕ್ಕೂ ಅವಾಸ್ತವ ಎಂದು ಅದ್ವೈತ ತಿಳಿಸುತ್ತದೆ. ಗುರುಗಳೆ, ಇದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?





ಶೃಂಗೇರಿಯಲ್ಲಿ ಪ್ರತಿ ವರ್ಷ ನಡೆಯುವ ವಿದ್ವತ್ ಸದಸ್ಸಿನಲ್ಲಿ, ಮಹಾಸ್ವಾಮಿಗಳು ಉದಯೋನ್ಮುಖ ವಿದ್ವಾಂಸರನ್ನು ಪ್ರೋತ್ಸಾಹಿಸುತ್ತಾರೆ. ಅವರು ತಪ್ಪುಗಳನ್ನು ಮಾಡಿದಾಗ ಅವರನ್ನು ನಯವಾಗಿ ತಿದ್ದುತ್ತಾರೆಯೇ ಹೊರತು, ಎಂದಿಗೂ ಅವರನ್ನು ಹತಾಶಗೊಳಿಸುವುದಿಲ್ಲ.



ಒಂದು ವಿಷಯವನ್ನು ಎತ್ತಿ ತೋರಿಸಲು, ತಿದ್ದಲು, ಪ್ರೋತ್ಸಾಹಿಸಲು, ಸಲಹೆ ನೀಡಲೂ, ನವಿರಾದ ಹಾಸ್ಯ ಮತ್ತು ಚಮತ್ಕಾರ ಪದಬಳಕೆ-ಯನ್ನು ಚತುರವಾಗಿ ಪರಮಪೂಜ್ಯರು ಉಪಯೋಗಿಸಿದ್ದುಂಟು. ಒಮ್ಮೆ ಸಂಸ್ಕೃತದ ಹುರುಪುಗನಾದ ಯುವಕ ಅವರ ಬಳಿಗೆ ಬಂದ.





ಮಹಾಸ್ವಾಮಿಗಳು ಕವಿತೆಯನ್ನು ಅವಲೋಕಿಸಿ ಅದರಲ್ಲಿ ಅನೇಕ ವಿಭಕ್ತಿ ದೋಷಗಳಿವೆ ಎಂದು ಮನಗಂಡರು. ಆದಾಗ್ಯೂ, ಅವರು ಆ ಯುವಕನನ್ನ ಪ್ರೋತ್ಸಾಹಿಸುವ ಮಾತುಗಳನ್ನು ನುಡಿದರು –





ಹೀಗೆನ್ನುತ್ತಾ ಅವರು ಯುವಕನನ್ನು ಆಶೀರ್ವದಿಸಿದರು.

ಒಬ್ಬ ವ್ಯಕ್ತಿ ತಾನು ಮಾಡಿದ ತಪ್ಪಿಗೆ ಜಗದ್ಗುರುಗಳಲ್ಲಿ ಕ್ಷಮೆಯಾಚಿಸಿ, ತನ್ನ ಅನುಚಿತ ನಡವಳಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳಬಾರದೆಂದು ವಿನಂತಿಸಿದ. ಪರಮಪೂಜ್ಯರು ಅವನಿಗೆ ಹೀಗೆ ಸಾಂತ್ವನ ನೀಡಿದರು –




ಉತ್ತರ ಭಾರತದ ಆಧ್ಯಾತ್ಮಿಕ ಸಾಧಕನೊಬ್ಬ ಶೃಂಗೇರಿಗೆ ಭೇಟಿ ನೀಡಿದ. ತನ್ನ ಸಾಧನೆಗೆ ಸಂಬಂಧಪಟ್ಟ ಸಂದೇಹವೊಂದು ಅವನಲ್ಲಿತ್ತು. ಅವನು ಅದನ್ನು ಪರಮಪೂಜ್ಯರಲ್ಲಿ ನಿವೇದಿಸಲು ಬಯಸಿದ. ಹಿಂಜರಿಕೆಯ ಕಾರಣ, ಅವನು ಅರಿಕೆ ಮಾಡಲು ವಿಫಲನಾದ. ಪರಮಪೂಜ್ಯರ ಪ್ರವಚನ ನಡೆಯುತ್ತಿತ್ತು.





ಈತನಿಗೆ ಪರಿಚಯವಿಲ್ಲದ ಕನ್ನಡ ಭಾಷೆಯಲ್ಲಿತ್ತು ಆ ಪ್ರವಚನ. ಮಹಾಸ್ವಾಮಿಗಳು ಸಭೆಯಲ್ಲಿದ್ದ ಆ ಸಾಧಕನ ಮೇಲೆ ದೃಷ್ಟಿಯನ್ನು ಇಟ್ಟು ಮುಗುಳ್ನಗುತ್ತಾ ಸಂಸ್ಕೃತದಲ್ಲಿ ಒಂದು ಶ್ಲೋಕವನ್ನು ಪಠಿಸಿದರು.




ಜಗದ್ಗುರುಗಳವರು ಹೇಳಿದ ಆ ಶ್ಲೋಕದಲ್ಲಿ ತಾನು ಮಾತುಗಳಲ್ಲಿ ವ್ಯಕ್ತಪಡಿಸದ ತನ್ನ ಸಮಸ್ಯೆಗೆ ಪರಿಹಾರವಿರುವುದಾಗಿ ಅರಿತುಕೊಂಡ. ಉಪನ್ಯಾಸ ಮುಗಿದ ನಂತರ, ಆತ ತನ್ನ ಅನುಭವವನ್ನು ಶೃಂಗೇರಿಯಲ್ಲಿ ತನಗೆ ಪರಿಚಿತನಾದ ಒಬ್ಬ ವ್ಯಕ್ತಿಯೊಂದಿಗೆ ಹಂಚಿಕೊಂಡ.





ಪರಮಪೂಜ್ಯರು ಪುಟ್ಟ ಮಕ್ಕಳನ್ನು ಆಶೀರ್ವದಿಸುವುದಕ್ಕೆ ಮುಂದಾಗುವುದು ಮಾತ್ರವಲ್ಲದೆ, ಹಾಸ್ಯಪೂರ್ವಕವಾಗಿಯೂ ಅವರುಗಳೊಂದಿಗೆ ಸಂವಹನವನ್ನು ಸಹಜವಾಗಿ ನಡೆಸುತ್ತಾರೆ.




ಜಗದ್ಗುರುಗಳು ದೈಹಿಕ ಮತ್ತು ಮಾನಸಿಕ ವಿಕಲಚೇತನರನ್ನು ವಿಶೇಷವಾಗಿ ಪ್ರೀತಿಯಿಂದ ಆಶೀರ್ವದಿಸುತ್ತಾರೆ ಹಾಗೂ ಅವರಲ್ಲಿ ಅಗತ್ಯವಿರುವವರಿಗೆ ಬೇಕಾದ ನೆರವು ನೀಡುತ್ತಾರೆ.




ಸಾವಿರಾರು ಜನರು ಅನುಗ್ರಹ, ಕಷ್ಟಗಳಿಗೆ ಪರಿಹಾರ ಮತ್ತು ಮಾರ್ಗದರ್ಶನಗಳನ್ನೂ ಅಪೇಕ್ಷಿಸಿ ಜಗದ್ಗುರುಗಳಲ್ಲಿಗೆ ಬರುತ್ತಾರೆ. ಅವರು ಎಲ್ಲರನ್ನೂ ಆಶೀರ್ವದಿಸುತ್ತಾರೆ. ಆದಾಗ್ಯೂ, ಜನರು ಅವರಲ್ಲಿ ಬಂದು ತಮ್ಮ ತಮ್ಮ ಬೇಡಿಕೆಗಳನ್ನು ಮಹಾಸ್ವಾಮಿಗಳು ಈಡೇರಿಸಿರುವುದಾಗಿ ವರದಿ ಮಾಡಿದಾಗ, ನಿರಹಂಕಾರಿಗಳಾದ ಪರಮಪೂಜ್ಯರು ಎಂದಿಗೂ ಅವುಗಳ ಶ್ರೇಯವನ್ನು ತಮ್ಮದಾಗಿಸಿಕೊಳ್ಳುವುದಿಲ್ಲ.
ಶಾರದಾಂಬೆಯ ಕೃಪೆಯಿಂದ ಇದು ನಡೆದುಹೋಗಿದೆ. ನಾನೇನನ್ನೂ ಮಾಡಿಲ್ಲ.
ತಮ್ಮ ಮಾರ್ಗದರ್ಶನ ಮತ್ತು ಅನುಗ್ರಹದಿಂದಾಗಿ ಮಾತ್ರ, ನನ್ನ ಆಧ್ಯಾತ್ಮಿಕ ಸಾಧನೆಗಳು ಚೆನ್ನಾಗಿ ಮುಂದುವರೆಯುತ್ತಿವೆ.
ಪರಮಪೂಜ್ಯರು ನನ್ನ ಮಗಳ ಮದುವೆಗೆ ಆಶೀರ್ವದಿಸಿದರು. ಆಕೆಗೊಂದು ಒಳ್ಳೆಯ ಸಂಬಂಧ ಕೂಡಿಬಂದಿದೆ.
ಮಹಾಸ್ವಾಮಿಗಳೆ, ತಾವು ಕಳೆದ ವರ್ಷ ನನ್ನ ಮಗನನ್ನು ಅನುಗ್ರಹಿಸಿದ್ದೀರಿ. ಅವನು ಉತ್ತಮ ಅಂಕಗಳನ್ನು ಗಳಿಸಿದ್ದಾನೆ ಮತ್ತು ಈಗ ವೈದ್ಯಕೀಯ ಕಾಲೇಜಿಗೆ ಸೇರಿದ್ದಾನೆ.
ಗುರುಗಳೆ, ನನ್ನ ಯಜಮಾನರಿಗೆ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ ಎಂದು ವೈದ್ಯರು ಹೇಳಿದ್ದಾರೆ. ತಾವು ಈ ಹಿಂದೆಯೇ ಹಾಗೆ ಹೇಳಿದ್ದೀರಿ.
ನಮ್ಮ ಗ್ರಾಮ ಅಭಿವೃದ್ಧಿ ಹೊಂದುತ್ತದೆ ಮತ್ತು ದೇವಸ್ಥಾನದ ಕುಂಭಾಭಿಷೇಕ ನೆರವೇರಲಿದೆ ಎಂದು ತಾವು ಕಳೆದ ವರ್ಷ ಆಶೀರ್ವದಿಸಿದ್ದೀರಿ. ತಮ್ಮ ಮಾತುಗಳು ನಿಜವಾಗಿವೆ, ಗುರುಗಳೆ.
ಜಗದ್ಗುರುಗಳವರ ಆಶೀರ್ವಾದದ ಕಾರಣ, ಮೀನುಗಾರರಾದ ನಾವು ಸಂತೋಷದಿಂದ ಬಾಳುತ್ತಿದ್ದೇವೆ.
ತಮ್ಮ ಕೃಪೆಯಿಂದಾಗಿ ನನ್ನ ಆರ್ಥಿಕ ತೊಂದರೆಗಳು ಕೊನೆಗೊಂಡಿವೆ, ಮಹಾಸ್ವಾಮಿ.
ಮಹಾಸ್ವಾಮಿ, ನನ್ನ ಮಗ ತಮ್ಮ ಆಶೀರ್ವಾದವನ್ನು ಪಡೆದ ಮತ್ತು ಈಗ ಕೈತುಂಬ ಸಂಬಳ ಸಿಗುವ ಉದ್ಯೋಗವನ್ನು ಪಡೆದುಕೊಂಡಿದ್ದಾನೆ.
ಗುರುಗಳೆ, ತಮ್ಮ ಅನುಗ್ರಹದಿಂದ ಮಾತ್ರ ಸಂಪೂರ್ಣ ಭಗವದ್ಗೀತೆಯನ್ನು ಕಂಠಪಾಠ ಮಾಡಲು ಮತ್ತು ಅದನ್ನು ಇಲ್ಲಿ ಒಪ್ಪಿಸಲು ನಮಗೆ ಸಾಧ್ಯವಾಯಿತು.
ಗುರುಗಳೆ, ತಮ್ಮ ಆಶೀರ್ವಾದದ ದೆಸೆಯಿಂದ, ಹಲವು ವರ್ಷಗಳಿಂದ ಸಂತಾನವಿಲ್ಲದ ನನ್ನ ಮಗಳು, ಈಗ ಗರ್ಭವತಿಯಾಗಿದ್ದಾಳೆ.

ಅವರ ಕಾಳಜಿ, ದಯೆ ಮತ್ತು ರಕ್ಷಣೆಗೆ ಪಾತ್ರವಾದ ಪ್ರಾಣಿಗಳಲ್ಲಿ ಹಸುಗಳು, ಆನೆಗಳು ಮತ್ತು ಜಿಂಕೆಗಳು ಸೇರಿವೆ. ಅವರ ನಿರ್ದೇಶನದಂತೆ ಹಲವಾರು ಗೋವುಗಳನ್ನು ಶೃಂಗೇರಿಯಲ್ಲಿ ಮತ್ತು ಭಾರತದ ಇತರ ಅನೇಕ ಸ್ಥಳಗಳಲ್ಲಿ ಚೆನ್ನಾಗಿ ನಿರ್ವಹಿಸಲ್ಪಟ್ಟ ಗೋಶಾಲೆಗಳಲ್ಲಿ ನೋಡಿಕೊಳ್ಳಲಾಗುತ್ತಿದೆ.






ಆಗಾಗ್ಗೆ ಪರಮಪೂಜ್ಯರು ಮಠದ ಆನೆಗಳಿಗೆ ಹಣ್ಣುಗಳನ್ನು ಮತ್ತಿತರ ತಿನಿಸುಗಳನ್ನು ತಾವೇ ಸ್ವತಃ ತಿನ್ನಿಸುತ್ತಾರೆ.




ಒಮ್ಮೆ ಮಠದ ಆನೆಯೊಂದು ಇದ್ದಕ್ಕಿದ್ದಂತೆ ಆರೋಗ್ಯ ತಪ್ಪಿ ಚಲಿಸುವ ಸಾಮರ್ಥ್ಯವನ್ನು ಕಳೆದುಕೊಂಡಿತು. ಮಾವುತನ ಮತ್ತಿತರರ ಪ್ರಯತ್ನಗಳು ಎಲ್ಲವೂ ವಿಫಲವಾದವು. ಮಠದ ಸಿಬ್ಬಂದಿಯೊಬ್ಬ ಇದನ್ನು ಜಗದ್ಗುರುಗಳಿಗೆ ತಿಳಿಸಿದಾಗ, ಅವರು ಕೆಲವು ಕ್ಷಣಕಾಲ ಕಣ್ಣು ಮುಚ್ಚಿ, ನಂತರ ಹೇಳಿದರು –




ರೋಗಗ್ರಸ್ತವಾದ ಆನೆಯ ಹಣೆಯ ಮೇಲೆ ಪವಿತ್ರ ಪ್ರಸಾದವನ್ನು ಹಚ್ಚಿದ ಕೂಡಲೇ, ಅದು ನಡೆಯಲು ಪ್ರಾರಂಭಿಸಿತು; ಅಲ್ಲಿನ ಜನರೆಲ್ಲರೂ ಸಂತೋಷಪಟ್ಟರು.



ಆ ಮಠದ ಸಿಬ್ಬಂದಿ ಮರಳಿ ಬಂದ –



1989ರಲ್ಲಿ ಪೀಠಾಧೀಶರಾದ ನಂತರ, ಜಗದ್ಗುರುಗಳು ಎಂಟು ದೊಡ್ಡ ವಿಜಯ ಯಾತ್ರೆಗಳನ್ನು ಕೈಗೊಂಡರು. ಆ ಮೂಲಕ ಧರ್ಮವನ್ನು ವ್ಯಾಪಕವಾಗಿ ಪ್ರಸಾರ ಮಾಡಿದರು, ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದರು ಹಾಗೂ ಅನೇಕ ದೇವಾಲಯಗಳನ್ನು ಪ್ರತಿಷ್ಠಾಪಿಸಿದರು.



ಮಠಾಧೀಶರಾದ ನಂತರ ಅವರ ಮೊದಲ ಪ್ರವಾಸ ನವೆಂಬರ್ 1991ರಿಂದ ಫೆಬ್ರವರಿ 1992ರವರೆಗೆ, ಕರ್ನಾಟಕ, ಕೇರಳ ಮತ್ತು ತಮಿಳುನಾಡನ್ನು ವ್ಯಾಪಿಸಿತು.

ಅವರ ಎರಡನೇ ಪ್ರವಾಸ 1992–93ರ ಅವಧಿಯಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ ಸಹಿತವಾಗಿ ಮಹಾರಾಷ್ಟ್ರವನ್ನು ಒಳಗೊಂಡಿತ್ತು.

ಮುಂದಿನದು, ಮೇ 1994ರಿಂದ ಜುಲೈ 1995ರವರೆಗೆ ನಡೆದ ಅಖಿಲ ಭಾರತ ಪ್ರವಾಸ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿತ್ತು.

2001ರಲ್ಲಿ ಪರಮಪೂಜ್ಯರು ರಾಮನಾಥ ಸ್ವಾಮಿ ದೇವಾಲಯದ ಕುಂಭಾಭಿಷೇಕಕ್ಕಾಗಿ ರಾಮೇಶ್ವರಕ್ಕೆ ಪ್ರಯಾಣ ಬೆಳೆಸಿದರು.

2007ರಲ್ಲಿ ಏಪ್ರಿಲ್ ನಿಂದ  ನವೆಂಬರ್ ವರೆಗಿನ ಪ್ರವಾಸದಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಸಂಚರಿಸಿದರು.

2010ರಲ್ಲಿ, ಒಂದು ತಿಂಗಳ ಪ್ರವಾಸದಲ್ಲಿ ಕಾಲಡಿ ಮತ್ತು ಸುತ್ತಮುತ್ತಲ ಸ್ಥಳಗಳ ಯಾತ್ರೆ ಮಾಡಿದರು.

2012–13ರ ಅವಧಿಯಲ್ಲಿ ಪರಮಪೂಜ್ಯರು ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಪ್ರವಾಸ ಕೈಗೊಂಡರು.

2017ರ ಪ್ರವಾಸ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ನಡೆಯಿತು.


ಅನೇಕ ರಾಷ್ಟ್ರಾಧ್ಯಕ್ಷರು, ಪ್ರಧಾನ ಮಂತ್ರಿಗಳು, ರಾಜ್ಯಪಾಲರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಂತ್ರಿಗಳು, ವಿವಿಧ ಮತ–ಸಿದ್ಧಾಂತಗಳ ಮುಖಂಡರು ಜಗದ್ಗುರುಗಳ ದರ್ಶನವನ್ನು ಪ್ರವಾಸಗಳಲ್ಲಿ, ಮತ್ತು ಅವರುಗಳು ಶೃಂಗೇರಿಗೆ ಭೇಟಿ ನೀಡಿದಾಗ, ಪಡೆದರು.

ಮಹಾಸ್ವಾಮಿಗಳ ಪೀಠಾಧಿಪತ್ಯದ ವರ್ಷಗಳಲ್ಲಿ ಅನೇಕ ಮಹತ್ತ್ವವುಳ್ಳ ಘಟನೆಗಳು ನಿಬಿಡವಾಗಿವೆ. ಶೃಂಗೇರಿಯಲ್ಲಿ ಮತ್ತು ಇತರೆಡೆಗಳಲ್ಲಿ ಮಠದ ಯೋಜನೆಗಳು ಅನೇಕರಿಗೆ ಅನುಕೂಲವಾಗಿವೆ.

1990ರಲ್ಲಿ ತುಂಗೆಗೆ ಭವ್ಯ ಸೇತುವೆಯನ್ನು ಉದ್ಘಾಟಿಸಿದರು. ಅದರ ಯೋಜನೆಯನ್ನು ರೂಪಿಸಿ, ನಿರ್ಮಾಣದ ಬಹುತೇಕ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಬಹುಮುಖ ಪ್ರತಿಭಾವಂತರಾದ ತಮ್ಮ ಗುರುನಾಥರ ಗೌರವಾರ್ಥ, ಅದನ್ನು 'ಶ್ರೀ ವಿದ್ಯಾತೀರ್ಥ ಸೇತು' ಎಂದು ಹೆಸರಿಸಿದರು.



ತಮ್ಮ ಗುರುವರೇಣ್ಯರಿಗೆ ತಕ್ಕ ಗೌರವವಾಗಿ, ಪರಮಪೂಜ್ಯರು 33ನೇ ಮತ್ತು 34ನೇ ಮಠಾಧೀಶರ ದೇಗುಲಗಳಿಗೆ ಒತ್ತಾಗಿ ಶೃಂಗೇರಿಯ ನರಸಿಂಹವನದಲ್ಲಿ ಸುಂದರ ಅಧಿಷ್ಠಾನ ಮಂದಿರವನ್ನು ನಿರ್ಮಾಪಿಸಿದರು. ಅದರ ಪ್ರತಿಷ್ಠಾ–ಕುಂಭಾಭಿಷೇಕವನ್ನು 1993ರಲ್ಲಿ ನೆರವೇರಿಸಿದರು.




1996ರಲ್ಲಿ ಶೃಂಗೇರಿಯಲ್ಲಿನ ಪ್ರಕೃತಿ–ರಮಣೀಯವಾದ ಕಾಲಭೈರವ ಬೆಟ್ಟದ ಮೇಲೆ ವೇದ–ಶಾಸ್ತ್ರ ಪಾಠಶಾಲೆಯ# ನೂತನ ಕಟ್ಟಡವನ್ನು ಜಗದ್ಗುರುಗಳು ಉದ್ಘಾಟಿಸಿದರು.





1999ರಲ್ಲಿ ಶಾರದೆಗೆ ಚಿನ್ನದ ರಥವನ್ನು ಅರ್ಪಿಸಲಾಯಿತು. ಎರಡು ವರ್ಷಗಳ ನಂತರ, ಗರ್ಭಗುಡಿಯ ಬೆಳ್ಳಿ ಬಾಗಿಲುಗಳನ್ನು ಚಿನ್ನದ ಬಾಗಿಲುಗಳಿಂದ ಬದಲಾಯಿಸಲಾಯಿತು. ಹಾಗೆಯೇ ಗರ್ಭಗುಡಿಯ ಒಳಗಿನ ಗೋಡೆಯನ್ನು ಚಿನ್ನದ ತಗಡಿನಿಂದ ಹೊದಿಸಲಾಯಿತು.

ಶೃಂಗೇರಿಗೆ ಆಗಮಿಸುವ ಭಕ್ತಸಮೂಹದ ಅನುಕೂಲಕ್ಕಾಗಿ ಅಡುಗೆಮನೆಯ ಸಮೇತವಾಗಿ ಅತಿವಿಸ್ತಾರವಾದ ಭೋಜನ–ಶಾಲೆಯನ್ನು ಪರಮಪೂಜ್ಯರು 1999ರಲ್ಲಿ ಉದ್ಘಾಟಿಸಿದರು. ಇಲ್ಲಿಂದ 10000ಕ್ಕೂ ಮೀರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಉಚಿತವಾಗಿ ಕಳುಹಿಸಲಾಗುತ್ತದೆ.




ಶ್ರೀ ಶಂಕರ ಅದ್ವೈತ ಸಂಶೋಧನಾ ಕೇಂದ್ರವನ್ನು ಶೃಂಗೇರಿಯಲ್ಲಿ 2001ರಲ್ಲಿ ಸ್ಥಾಪಿಸಲಾಯಿತು. ಮಹಾಸ್ವಾಮಿಗಳ ನಿರ್ದೇಶನದಂತೆ ಇದರ ಚಟುವಟಿಕೆಗಳಲ್ಲಿ ಶಾಸ್ತ್ರ ಗ್ರಂಥಗಳ ಪ್ರಕಟಣೆ ಸೇರಿದೆ. ಇಲ್ಲಿ ತಾಳೆಗರಿ ಗ್ರಂಥಗಳ ಹಾಗೂ ಕರಡುಪ್ರತಿ ಕಡತಗಳ ಸಂಗ್ರಹವಿದೆ.




ಶ್ರೀ ಶಂಕರ ಅದ್ವೈತ ಸಂಶೋಧನಾ ಕೇಂದ್ರ, ಶೃಂಗೇರಿ

ಪರಮಪೂಜ್ಯರು 'ಗುರು–ನಿವಾಸ'ವನ್ನು 2003ರಲ್ಲಿ ಉದ್ಘಾಟಿಸಿದರು. ಶೃಂಗೇರಿಯಲ್ಲಿ ಇದು ಅವರ ನಿವಾಸವನ್ನು ಮಾತ್ರವಲ್ಲ, ಭಕ್ತಾದಿಗಳು ಅವರ ದರ್ಶನವನ್ನು ಪಡೆಯಲು ಹಾಗೂ ಅವರು ನೆರವೇರಿಸುವ ಚಂದ್ರಮೌಳೀಶ್ವರ ಪೂಜೆಯನ್ನು ವೀಕ್ಷಿಸಲು ಅನುಕೂಲವಾದ ಬಹಳ ವಿಶಾಲವಾದ ಸಭಾಂಗಣವನ್ನೂ ಒಳಗೊಂಡಿದೆ.



ಗುರು–ನಿವಾಸ, ಶೃಂಗೇರಿ

ಅವರ ನಿರ್ದೇಶನದಂತೆ 2006ರಲ್ಲಿ ಪ್ರಾರಂಭಿಸಲ್ಪಟ್ಟ 'ಗೀತಾ ಜ್ಞಾನ ಯಜ್ಞ'ದ ಯೋಜನೆಯಡಿ, ಭಗವದ್ಗೀತೆಯ 18 ಅಧ್ಯಾಯಗಳನ್ನು ಮನಃಪಾಠ ಮಾಡಿ ಒಪ್ಪಿಸುವವರಿಗೆ ಪ್ರಮಾಣಪತ್ರ ಮತ್ತು ನಗದು ಪಾರಿತೋಷಕವನ್ನು ನೀಡಲಾಗುತ್ತದೆ. ಜಗದ್ಗುರುಗಳು ಪ್ರಶಸ್ತಿ ಪುರಸ್ಕೃತರನ್ನು ಆಶೀರ್ವದಿಸುತ್ತಾರೆ ಮತ್ತು ವೈಯಕ್ತಿಕವಾಗಿ ಪರೀಕ್ಷೆಯ ಅಂತಿಮ ಸುತ್ತನ್ನು ಸ್ವತಃ ನಡೆಸಿದ್ದಾರೆ.




# ವೇದ ಮತ್ತು ಶಾಸ್ತ್ರಗಳನ್ನು ಕಲಿಯುವ ಹುಡುಗರಿಗೆ ಉಚಿತ ವಸತಿ ಮುಂತಾದ ಸೌಕರ್ಯವಿರುವ ಪಾಠಶಾಲೆ.

ಪರಮಪೂಜ್ಯರು ಶೃಂಗೇರಿಯ ನರಸಿಂಹವನದಲ್ಲಿ ಭಗವಾನ್ ವೇದ ವ್ಯಾಸರ ದೇಗುಲವನ್ನು 2007ರಲ್ಲಿ ಪ್ರತಿಷ್ಠಾಪಿಸಿದರು.



ನಾಲ್ಕು ಅಮ್ನಾಯ ಪೀಠಗಳನ್ನು ಪ್ರತಿನಿಧಿಸುವ ಶಂಕರಾಚಾರ್ಯರು — ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು, ದ್ವಾರಕ ಮತ್ತು ಬದರಿ ಪೀಠಗಳ ಶ್ರೀ ಸ್ವರೂಪಾನಂದ ಸರಸ್ವತೀ ಮಹಾಸ್ವಾಮಿಗಳು, ಹಾಗೂ ಪುರಿ ಗೋವರ್ಧನ ಪೀಠದ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳು — ಸೇರಿದ ಸಭೆಗಳು 1993ರಲ್ಲಿ ಶೃಂಗೇರಿಯಲ್ಲಿ, ಮತ್ತೆ 2007ರಲ್ಲಿ ಬೆಂಗಳೂರಿನಲ್ಲಿ ನಡೆದವು.




33ನೇ ಪೀಠಾಧಿಪತಿಗಳು ಆದಿ ಶಂಕರರ ಜನ್ಮಸ್ಥಳವನ್ನು ಗುರುತಿಸಿದ ಶತಮಾನೋತ್ಸವವನ್ನು ಕಾಲಡಿಯಲ್ಲಿ 2010ರಲ್ಲಿ ನಡೆಸಲಾಯಿತು. ಅಲ್ಲಿನ ದೇವಾಲಯಗಳ ಜೀರ್ಣೋದ್ಧಾರವನ್ನು ಮತ್ತು ಕುಂಭಾಭಿಷೇಕವನ್ನು ನೆರವೇರಿಸಲಾಯಿತು.





ಪರಮಪೂಜ್ಯರು ಶೃಂಗೇರಿಯಲ್ಲಿ ಆದಿ ಶಂಕರರ ದೇವಾಲಯವನ್ನು ಭವ್ಯವಾಗಿ ನವೀಕರಿಸಿ 2011ರಲ್ಲಿ ಅದರ ಕುಂಭಾಭಿಷೇಕವನ್ನು ನೆರವೇರಿಸಿದರು.



ಶಾರದಾ ಪೀಠದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ 2011ರಲ್ಲಿ ಅದ್ದೂರಿಯಿಂದ ‘ಆಯುತ-ಚಂಡಿ-ಯಜ್ಞವನ್ನು’# ಆಚರಿಸಲಾಯಿತು. 1200ಕ್ಕೂ ಹೆಚ್ಚು ಋತ್ವಿಜರು ಕೂಡಿ ನಡೆಸಿದ ಈ ಯಜ್ಞದಲ್ಲಿ ಲೋಕಕಲ್ಯಾಣಕ್ಕಾಗಿ ಜಗನ್ಮಾತೆಯ ಕೃಪೆಯನ್ನು ಕೋರಲಾಯಿತು. ಆ ಸಮಯದಲ್ಲಿ, ಪರಮಪೂಜ್ಯರು ವಿನಮ್ರವಾಗಿ ನುಡಿದರು –




2014ರಲ್ಲಿ ಜಗದ್ಗುರುಗಳಿಂದ ಬಿಡುಗಡೆಗೊಂಡ ‘ಅದ್ವೈತ ಶಾರದಾ’ ಜಾಲತಾಣ ಶ್ರೀ ಆದಿ ಶಂಕರರ ಕೃತಿಗಳನ್ನು ಮತ್ತು ಅವುಗಳ ವ್ಯಾಖ್ಯಾನ ಮತ್ತು ಉಪವ್ಯಾಖ್ಯಾನಗಳನ್ನು ಓದಲು, ಅವುಗಳಲ್ಲಿ ಸಂಶೋಧನೆಯನ್ನು ನಡೆಸಲು ಜನರಿಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಕೊಂಡಿನುಡಿತಗಳು (ಹೈಪೆರ್-ಲಿಂಕ್ ಗಳು) ಮತ್ತು ಉಲ್ಲೇಖಗಳು ಇವೆ, ಇದರಲ್ಲಿರುವ ಗ್ರಂಥಗಳ ಸಂಗ್ರಹದಲ್ಲಿ ಯಾವುದೇ ಪದವನ್ನು ಹುಡುಕುವ ಸೌಲಭ್ಯವೂ ಇದೆ.



# 10000ಕ್ಕೂ ಹೆಚ್ಚು ಬಾರಿ ದುರ್ಗಾ-ಸಪ್ತಶತಿ ಮಂತ್ರಗಳ ಪಾರಾಯಣ ಮಾಡಿ, ಅಗ್ನಿಯಲ್ಲಿ ಆಹುತಿಗಳನ್ನು ನೀಡಲಾಗುವ ಯಾಗ.

ಶೃಂಗೇರಿಯಲ್ಲಿ ಮಠದ ಮುಖ್ಯಪ್ರವೇಶದ್ವಾರದಲ್ಲಿ ಭವ್ಯವಾದ ರಾಜಗೋಪುರ ನಿರ್ಮಿಸಲ್ಪಟ್ಟಿತು. ಅದರ ಕುಂಭಾಭಿಷೇಕವನ್ನು 2014ರಲ್ಲಿ ಮಹಾಸ್ವಾಮಿಗಳು ನೆರವೇರಿಸಿದರು.



ಯಾತ್ರಾರ್ಥಿಗಳಿಗೆ 'ಶ್ರೀ ಶಾರದಾ ಕೃಪಾ', 'ಯಾತ್ರಿ ನಿವಾಸ' ಮತ್ತು 'ಭಾರತೀ ತೀರ್ಥ ಕೃಪಾ' ಎಂಬೀ ಮೂರು ದೊಡ್ಡ ಅತಿಥಿ ಗೃಹಗಳು, ಮುಖ್ಯವಾಗಿ ಸಂನ್ಯಾಸಿಗಳಿಗೆ 'ತಪಸ್ವಿ ಕುಟೀರ', ಮತ್ತು ಒಂದು ವೃದ್ಧಾಶ್ರಮ ಶೃಂಗೇರಿಯಲ್ಲಿ ನಿರ್ಮಿತವಾದವು ಮತ್ತು ಅವುಗಳನ್ನು ಜಗದ್ಗುರುಗಳವರು ಉದ್ಘಾಟಿಸಿದರು.



ಭಾರತೀ ತೀರ್ಥ ಕೃಪಾ, ಶೃಂಗೇರಿ


ತೋರಣ ಗಣಪತಿ ಸ್ವಾಮಿಯ ಸುಂದರವಾದ ದೇವಾಲಯದ ನಿರ್ಮಾಣವಾಯಿತು. ಪರಮಪೂಜ್ಯರು ಅದರ ಕುಂಭಾಭಿಷೇಕವನ್ನು 2014ರಲ್ಲಿ ನೆರವೇರಿಸಿದರು.



ಶೃಂಗೇರಿ, ಕಾಲಡಿ, ಬೆಂಗಳೂರು, ನವದೆಹಲಿ, ಮುಂಬೈ, ಚೆನ್ನೈ ಮತ್ತು ಇತರೆಡೆಗಳಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ, ಮಠದ ವತಿಯಿಂದ ಅನೇಕ ವೇದ ಪಾಠಶಾಲೆಗಳನ್ನು ಸ್ಥಾಪಿಸಲಾಗಿದೆ.



ಶ್ರೀ ಶಾರದಾ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್ಮೆಂಟ್, ನವದೆಹಲಿ



ಜ್ಞಾನೋದಯ ಸ್ಕೂಲ್, ಬೆಂಗಳೂರು

ಪರಮಪೂಜ್ಯರ ಗುರುಗಳು ಸ್ಥಾಪಿಸಿ ಬೆಳೆಸಿದ ಶಾರದಾ ಧನ್ವಂತರಿ ಚ್ಯಾರಿಟೆಬಲ್ ಆಸ್ಪತ್ರೆಯನ್ನು ಪರಮಪೂಜ್ಯರು ಪೋಷಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ಮತ್ತು ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ* ಮಠದ ಕೆಲವು ಜಂಟಿ ಯೋಜನೆಗಳಾಗಿವೆ.



ರಂಗದೊರೆ ಮೆಮೋರಿಯಲ್ ಆಸ್ಪತ್ರೆ, ಬೆಂಗಳೂರು



ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು


ಮಠದ ನೂತನ ಶಾಖೆಗಳನ್ನು ಮತ್ತು ಧರ್ಮಾರ್ಥ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ. ಅಸ್ತಿತ್ವದಲ್ಲಿರುವ ಶಾಖೆಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅಮೇರಿಕಾ ಮತ್ತು ಕೆನಡಾದಲ್ಲಿ ಅಂಗಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಮತ್ತು ಅಲ್ಲಿ ದೇವಾಲಯಗಳು ಪ್ರತಿಷ್ಠಾಪಿಸಲ್ಪಟ್ಟಿವೆ.



ಶ್ರೀ ಶೃಂಗೇರಿ ಭಾರತೀ ವಿದ್ಯಾಶ್ರಮ, ಚೆನ್ನೈ

* ಪರಮಪೂಜ್ಯರ ಆಶೀರ್ವಾದದೊಂದಿಗೆ ಇತರ ನಗರಗಳಲ್ಲೂ ಆಸ್ಪತ್ರೆಗಳ ನಿರ್ಮಾಣ ಕಾರ್ಯ ನಡೆಯುತ್ತಲಿದೆ.


2015 ಜನವರಿ 4ರಂದು ಜಗದ್ಗುರುಗಳವರು ಶೃಂಗೇರಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದರು –




ಶ್ರೀ ವೆಂಕಟೇಶ್ವರ ಪ್ರಸಾದ ಅವರು 1993 ಜುಲೈ 24ರಂದು ಧಾರ್ಮಿಕ ದಂಪತಿಗಳಾದ ಶ್ರೀ ಕುಪ್ಪ ಶಿವಸುಬ್ರಹ್ಮಣ್ಯ ಅವಧಾನಿಗಳು ಮತ್ತು ಶ್ರೀಮತಿ ಸೀತಾ ನಾಗಲಕ್ಷ್ಮಿ ಅವರಿಗೆ ಜನಿಸಿದರು. ಚಿಕ್ಕ ವಯಸ್ಸಿನಲ್ಲೇ ಅವರು ಸಂಪೂರ್ಣ ಕೃಷ್ಣ ಯಜುರ್ವೇದವನ್ನು, ಮತ್ತದರ ಪದ-ಪಾಠ[#] ಮತ್ತು ಕ್ರಮ-ಪಾಠಗಳನ್ನು[#] ತಮ್ಮ ಅಜ್ಜ ಮತ್ತು ತಂದೆಯವರಿಂದ ಕಲಿತಿದ್ದರು.




ಅವರು 2006ರಲ್ಲಿ ಶೃಂಗೇರಿಯಲ್ಲಿ ಪರಮಪೂಜ್ಯರ ದರ್ಶನವನ್ನು ಪಡೆದುದು ಅವರ ಮೇಲೆ ಗಂಭೀರವಾದ ಪರಿಣಾಮ ಬೀರಿತ್ತು. ಶೃಂಗೇರಿಗೆ ಮತ್ತೊಮ್ಮೆ 2009ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ, ಅವರು ಪರಮಪೂಜ್ಯರನ್ನು ಕೋರಿದರು –





ಚರಿತ್ರೆ ಮರುಕಳಿಸಿದಂತೆ ಆಯಿತು.


ಮಹಾಸ್ವಾಮಿಗಳು ತಮ್ಮ ಶಿಷ್ಯನಿಗೆ ನ್ಯಾಯ ಮತ್ತು ವೇದಾಂತ ಶಾಸ್ತ್ರಗಳನ್ನು ಬದ್ಧತೆಯಿಂದ ಯಥಾಸಂಪ್ರದಾಯ ಬೋಧಿಸಿದರು.



ಬ್ರಹ್ಮಚಾರಿಗಳ ಭಕ್ತಿ-ವೈರಾಗ್ಯಗಳನ್ನು ಮನಗಂಡು ಪ್ರಸನ್ನರಾದ ಪರಮಪೂಜ್ಯರು 2015 ಜನವರಿ 23ರಂದು ಅವರಿಗೆ ಸಂನ್ಯಾಸ ದೀಕ್ಷೆಯನ್ನು ಅನುಗ್ರಹಿಸಿದರು.



ಪರಮಪೂಜ್ಯರು ತಮ್ಮ ಶಿಷ್ಯರಿಗೆ ಪ್ರಣವ ಮತ್ತು ಮಹಾವಾಕ್ಯಗಳ ದೀಕ್ಷೆಯಿತ್ತು, **ವಿಧುಶೇಖರ ಭಾರತೀ** ಎಂಬ ಯೋಗಪಟ್ಟವನಿತ್ತರು.



# ವೇದದ ಎರಡು ಸಾಂಪ್ರದಾಯಿಕ ಉತ್ತರೋತ್ತರ ಪಾಠಕ್ರಮಗಳು.


ಪರಮಪೂಜ್ಯರು ಸಮಗ್ರ ನ್ಯಾಯ ಮತ್ತು ವೇದಾಂತ ಶಾಸ್ತ್ರಗಳನ್ನು ತಮ್ಮ ಕುಶಾಗ್ರಮತಿ ನಿಷ್ಠಾವಂತ ಶಿಷ್ಯರಿಗೆ ಆಳವಾಗಿ ಬೋಧಿಸಿದರು.




ಶಾರದಾಂಬೆಯ ದೇವಾಲಯದ ಗರ್ಭಗೃಹದ ಮೇಲೆ ನಿರ್ಮಿಸಲ್ಪಟ್ಟ ಚಿನ್ನದ ಗೋಪುರದ ಕುಂಭಾಭಿಷೇಕವನ್ನು ಪರಮಪೂಜ್ಯರು ಫೆಬ್ರವರಿ 2017ರಲ್ಲಿ ನೆರವೇರಿಸಿದರು.




ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವವನ್ನು ಭಕ್ತಿಶ್ರದ್ಧೆಗಳಿಂದ 2017 ಅಕ್ಟೋಬರ್ 18ರಂದು ಆಚರಿಸಲಾಯಿತು.



ಪರಮಪೂಜ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ವಿನಮ್ರವಾಗಿ ತಮ್ಮ ಪ್ರವಚನದಲ್ಲಿ ಹೇಳಿದರು –




ಶ್ರೀ ಆದಿ ಶಂಕರರಿಂದ ತಮ್ಮ ದಿವ್ಯ ಗುರುನಾಥರ ವರೆಗೆ ನಡೆದುಬಂದ ಗುರುಶ್ರೇಷ್ಠರ ಅವಿಚ್ಛಿನ್ನ ಪರಂಪರೆಯನ್ನು ಮುಂದಿವರೆಸುತ್ತಾ, ತೀವ್ರ ವಿರಕ್ತಿ, ನಿಷ್ಕಳಂಕ ಚಾರಿತ್ರ್ಯ, ಸರಿಸಾಟಿಯಿಲ್ಲದ ವಿದ್ವತ್ತು ಹಾಗೂ ದೃಢ ಸಂಪ್ರದಾಯನಿಷ್ಠೆಗಳನ್ನುಳ್ಳ ಸ್ಫೂರ್ತಿಪ್ರದ ಯತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು, ಶೃಂಗೇರಿ ಶ್ರೀ ಶಾರದಾ ಪೀಠವನ್ನು ಅದರ 36ನೇ ಶಂಕರಾಚಾರ್ಯರಾಗಿ ಅಲಂಕರಿಸಿ, ತಮ್ಮ ನೆಚ್ಚಿನ ಆಶೀರ್ವಾದವನ್ನು ತಮ್ಮ ಭಕ್ತಸ್ತೋಮದ ಮೇಲೆ ಸುರಿಸುತ್ತಲಿದ್ದಾರೆ.



ISBN 978-81-957509-0-0
9 788195 750900



# Centre for Brahmavidya


List of Publications — June 2022

## ENGLISH




Title: From Sorrows to Bliss
Pages: 232 | Subsidised price: ₹100/-
Author: A Disciple
ISBN: 978-81-944382-4-3

This publication comprises the invaluable teachings of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, presented in four parts, namely, Definitive Answers, Motivating Narratives, Scriptural Expositions and Incisive Essays.



Title: 108 Facets of the Inimitable Guru
Pages: 302 | Subsidised price: ₹100/-
Authors: Dr. Meenakshi Lakshmanan & Dr. H. N. Shankar
ISBN: 978-81-950399-7-5

Elucidation of the Ashtottara-shata-namavali (108 sacred names) of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, composed by His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of the Peetham.



Title: Shankaracharya of Sringeri - His Holiness Jagadguru Sri Bharathi Theertha Mahaswamiji
Pages: 32 | Subsidised price: ₹50/-
Author: A Disciple
ISBN: 978-81-944382-8-1

A pictorial book portraying the life and teachings of His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of Sringeri Sri Sharada Peetham.

## HINDI



Title: Yog, Sakshatkar Tatha Jivanmukti
Pages: 247 | Subsidised price: ₹100/-
Translator: Vidwan Dr. Satheesha K. S.
ISBN: 978-81-950399-3-7

This is an invaluable wealth of information on the spiritual practices — Karma-yoga, Kundalini-yoga, Samadhi, deep contemplation on Brahman, etc. — of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham. It presents the spiritual journey of this great Yogi, an unmatched Advaita-Vedantin and a Jivanmukta par excellence.



Title: Paramapujya Jagadguru Sri Abhinava Vidyatheertha Mahaswami ji ki Shikshaprad Neetikathaen
Pages: 276 | Subsidised price: ₹100/-
Translator: Sri Divyasanu Pandey
ISBN: 978-81-950399-2-0

His Holiness Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham was a rare sage who rendered even highly complex scriptural topics easily intelligible to even common folk through His narratives. This is a compilation of stories conceived by Him on the spot or based on the Vedas, Ramayana, Mahabharata, Puranas, etc.



Title: Dukhon Se Paramanand Tak
Pages: 336 | Subsidised price: ₹120/-
Translator: Hindi Martand Sri K. V. Srinivasa Murthy
ISBN: 978-81-950399-1-3

This publication comprises the invaluable teachings of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, presented in four parts, namely, Definitive Answers, Motivating Narratives, Scriptural Expositions and Incisive Essays.



Title: Sringeri Shankaracharya - Paramapujya Jagadguru Sri Bharathi Theertha Mahaswami Ji
Pages: 32 | Subsidised price: ₹50/-
Author: Smt. Jayasree Venkateswaran
ISBN: 978-81-950399-6-8

A pictorial book portraying the life and teachings of His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of Sringeri Sri Sharada Peetham.

**Centre for Brahmavidya**
SVK Towers, 8th Floor, A25, Industrial Estate, Guindy
Chennai 600032; INDIA
Email: contact@centreforbrahmavidya.org

**To place orders:**
www.centreforbrahmavidya.org

**Contact (WA):**
K. Venkataramanan: +91-7397487666
K. Parthasarathy: +91-7358388704



# Centre for Brahmavidya

List of Publications — June 2022

## TAMIL



Title: Jagadguruvin Sollamudam
Pages: 192 | Subsidised price: ₹80/-
Author: A Disciple
ISBN: 978-81-944382-6-7

This publication comprises the invaluable teachings of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, presented in three parts, comprising His Replies to the questions of His disciples, Scriptural Expositions and Essays.



Title: Arulmigu Guruvin Porulmigu-Naamangal
Pages: 296 | Subsidised price: ₹100/-
Author: K. Suresh Chandar
ISBN: 978-81-944382-2-9

Elucidation of the Ashtottara-shata-namavali (108 sacred names) of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, composed by His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of the Peetham.



Title: Sringeri Shankaracharyal - Jagadguru Sri Bharathi Theertha Mahaswamigal
Pages: 32 | Subsidised price: ₹50/-
Author: Dr. R. Suganya
ISBN: 978-81-950399-4-4


A pictorial book portraying the life and teachings of His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of Sringeri Sri Sharada Peetham.



Title: Endrum Puthiyavar
Pages: 202 | Subsidised price: ₹80/-
Author: Dr. V. N. Muthukumar
ISBN: 978-81-944382-0-5

This book is a detailed, word-by-word exposition of a Sanskrit verse in veneration of His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham, composed by His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of the Peetham.

## KANNADA



Title: Tiliheluva Neetikathegalu
Pages: 246 | Subsidised price: ₹100/-
Author: Dr. H. N. Shankar
ISBN: 978-81-944382-9-8

This book contains a compilation of parables narrated by His Holiness Jagadguru Sri Abhinava Vidyatheertha Mahaswamiji, the 35th Jagadguru Shankaracharya of Sringeri Sri Sharada Peetham. The sources of the parables are His benedictory addresses and private conversations.



Title: Sringeri Shankaracharyaru - Paramapujya Jagadguru Sri Bharathi Theertha Mahaswamigalu
Pages: 32 | Subsidised price: ₹50/-
Author: Prof. R. Muralishankar
ISBN: 978-81-950399-5-1

A pictorial book portraying the life and teachings of His Holiness Jagadguru Sri Bharathi Theertha Mahaswamiji, the 36th Jagadguru Shankaracharya and the reigning Pontiff of Sringeri Sri Sharada Peetham.

**Centre for Brahmavidya**
SVK Towers, 8th Floor, A25, Industrial Estate, Guindy
Chennai 600032; INDIA
Email: contact@centreforbrahmavidya.org

**To place orders:**
www.centreforbrahmavidya.org

**Contact (WA):**
K. Venkataramanan: +91-7397487666
K. Parthasarathy: +91-7358388704